# ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ : ಬಳ್ಳಾರಿ ವಿಭಾಗ : ಬಳ್ಳಾರಿ.

ಸಂ: ಕಕರಸಾ/ಬವಿ/ಸಂಚಾರ/ವಾಣಿಜ್ಯ/ 2743 /2021-22 ದಿನಾಂಕ: 19-03-2022.

## : ಮ್ಯಾನುವಲ್ ಸಂಧಾನ ಪ್ರಕಟಣೆ ಸಂಖ್ಯೆ: 04 / 2021 :

ಬಳ್ಳಾರಿ ವಿಭಾಗದ ವ್ಯಾಪ್ತಿಯಲ್ಲಿರುವ ಕೆಳಕಂಡ ಬಸ್ ನಿಲ್ದಾಣದ ತೆರೆದ ಜಾಗೆಗಳ ಹೊರಗಡೆ ಒಂದು ಪ್ಯಾಕೇಜ್ ಹಾಗೂ ಒಳಗಡೆ ಒಂದು ಪ್ಯಾಕೇಜ್ ಪದ್ಧತಿಯಲ್ಲಿ ಜಾಹೀರಾತು/ಹೋಡಿಂಗ್ಸ್‌ಗಳನ್ನು ಗುರುತಿಸಿರುವ ಸ್ಥಳಗಳಲ್ಲಿ (Hoardings, Neon Sign, Video Walls, Pillar Boards, Platform Boards, Signages, Glow Signs, Unipoles, Arch, etc.,) ಪ್ರದರ್ಶಿಸುವ ಸಂಬಂಧ ಮ್ಯಾನುವಲ್ ಸಂಧಾನವನ್ನು ದಿನಾಂಕ: 12-04-2022 ರಂದು ಆಹ್ವಾನಿಸಲಾಗಿದ್ದು, ಆಸಕ್ತವುಳ್ಳ ಬೇಡಿಕೆದಾರರು ಸಂಸ್ಥೆಯ ನಿಯಮಗಳಡಿ ಇಚ್ಛೆಸಿರುವ ಪ್ಯಾಕೇಜ್‌ಗಳಿಗೆ ನೇರವಾಗಿ ಸಂಧಾನದಲ್ಲಿ ಭಾಗವಹಿಸಬಹುದಾಗಿದೆ.

| ಕ್ರ ಸಂ | ಜಾಹೀರಾತಿ ವಿವರ. | | ಅಳತೆ | ಬೋರ್ಡ್ ಸಂಖ್ಯೆ | ಒಟ್ಟು ಚದರ ಅಡಿ | ಮಿತವ್ಯಯ ಮಾಸಿಕ ಶುಲ್ಕ | ಇ.ಎಂ.ಡಿ., ಮೊತ್ತ | ಅರ್ಜಿ ಶುಲ್ಕ & GST ಶುಲ್ಕ |
|---|---|---|---|---|---|---|---|---|
| 1 | 2 | | 3 | 4 | 5 | 6 | 7 | 8 |
| | ಬಳ್ಳಾರಿ ನಗರ ಬಸ್ ನಿಲ್ದಾಣದ ಹೊರ ಆವರಣದ ತೆರೆದ ಜಾಗೆಗಳಲ್ಲಿ ಹೋರ್ಡಿಂಗ್ಸ್ ಜಾಹೀರಾತು ಪ್ರದರ್ಶನದ ವಿವರ (ಪ್ಯಾಕೇಜ್ ಸಂ: 01) | | | | | | | |
| 1 | Bus Bay-3 ರ ಮೇಲ್ಭಾಗದಲ್ಲಿ ಮತ್ತು ಸಂಚಾರ ನಿಯಂತ್ರಕರ ಕೊಠಡಿ ಮೇಲ್ಭಾಗದಲ್ಲಿ | A | 16X6 | 17 | 1632 | ₹. 1,08,200/- | ₹. 3,24,600/- | ₹. 1,277/- |
| | ಮಾಲ್‌ನ ಮುಂಭಾಗದ ತೆರೆದ ಜಾಗೆಯಲ್ಲಿ | B | 4X2 | 15 (2 side) | 240 | | | |
| | | | | 26 (1 side) | 208 | | | |
| | ಕಾಂಪೌಂಡ್ ಗೋಡೆಗೆ (ಸಂಸ್ಥೆಯು ಸೂಚಿಸುವ ಸ್ಥಳದಲ್ಲಿ) | C | 25X10 | 8 | 2000 | | | |
| | ಕಾಂಪೌಂಡ್ ಗೋಡೆಗೆ (ಸಂಸ್ಥೆಯು ಸೂಚಿಸುವ ಸ್ಥಳದಲ್ಲಿ) | D | 30X10 | 3 | 900 | | | |
| | Bus Bay-1,2,3 ರಲ್ಲಿ ಸಂಸ್ಥೆಯು ಸೂಚಿಸುವ ಸ್ಥಳಗಳಲ್ಲಿ ಮತ್ತು ರಸ್ತೆಗಿಂತ 16 ಅಡಿ ಎತ್ತರದಲ್ಲಿ | E | 20X5 | 6 | 600 | | | |
| | ಬಳ್ಳಾರಿ ನಗರ ಬಸ್ ನಿಲ್ದಾಣದ ಒಳ ಆವರಣದ ತೆರೆದ ಜಾಗೆಗಳಲ್ಲಿ ಜಾಹೀರಾತು ಪ್ರದರ್ಶನದ ವಿವರ (ಪ್ಯಾಕೇಜ್ ಸಂ: 02) | | | | | | | |
| 2 | ಪ್ಲಾಟ್‌ಫಾರಂ ಬೋರ್ಡ್ (ಎರದು ಬದಿಯಲ್ಲಿ) ರಸ್ತೆಗಿಂತ 16 ಅಡಿ ಎತ್ತರದಲ್ಲಿ | F | 2X20X 0.75 | 9 | 270 | ₹. 29,700/- | ₹. 89,100/- | ₹. 351/- |
| | ಪಿಲ್ಲರ್ ಬೋರ್ಡ್ ರಸ್ತೆಗಿಂತ 08 ಅಡಿ ಎತ್ತರದಲ್ಲಿ | G | 3X6 | 36 | 648 | | | |
| | ವಿಡಿಯೋ ವಾಲ್ಸ್ | H | 8X 8 | 2 | 128 | | | |
| | ನಿಯಾನ್ ಸೈನ್ಸ್ ರಸ್ತೆಗಿಂತ 16 ಅಡಿ ಎತ್ತರದಲ್ಲಿ | K | 4X 5 | 7 | 140 | | | |
| | ಬಳ್ಳಾರಿ ಕೇಂದ್ರ ಬಸ್ ನಿಲ್ದಾಣದ ಹೊರ ಆವರಣದ ತೆರೆದ ಜಾಗೆಗಳಲ್ಲಿ ಹೋರ್ಡಿಂಗ್ಸ್ ಜಾಹೀರಾತು ಪ್ರದರ್ಶನದ ವಿವರ (ಪ್ಯಾಕೇಜ್ ಸಂ: 01) | | | | | | | |
| 3 | ಹೊರಗಡೆ ಹೋರ್ಡಿಂಗ್ಸ್ (ಮುಖ್ಯ ರಸ್ತೆಗೆ) | E | 15X10 | 4 | 600 | ₹. 15,406/- | ₹. 46,218/- | ₹. 182/- |
| | ಒಳ ಆವರಣ ಹೋರ್ಡಿಂಗ್ಸ್ | F | 10X6 | 8 | 480 | | | |
| | ಹೋರ್ಡಿಂಗ್ಸ್ (ಮುಖ್ಯ ಕಟ್ಟಡದ ಪೂರ್ವಕ್ಕೆ) | G | 10X6 | 12 | 720 | | | |
| | ಸಿರುಗುಪ್ಪ ಬಸ್ ನಿಲ್ದಾಣದ ಹೊರ ಆವರಣದ ತೆರೆದ ಜಾಗೆಗಳಲ್ಲಿ ಹೋರ್ಡಿಂಗ್ಸ್ ಜಾಹೀರಾತು ಪ್ರದರ್ಶನದ ವಿವರ (ಪ್ಯಾಕೇಜ್ ಸಂ: 01) | | | | | | | |
| 4 | ಹೊರಗಡೆ ಹೋರ್ಡಿಂಗ್ಸ್ (ಮುಖ್ಯ ರಸ್ತೆಗೆ) | Z4 | 15 X8 | 2 | 240 | ₹. 5,148/- | ₹. 15,444/- | ₹. 118/- |
| | ಒಳ ಆವರಣ ಹೋರ್ಡಿಂಗ್ಸ್ | Z5 | 12 X8 | 4 | 384 | | | |
| | ಕುರುಗೋಡು ಬಸ್ ನಿಲ್ದಾಣದ ಹೊರಗಡೆ ತೆರೆದ ಜಾಗೆಗಳಲ್ಲಿ ಹೋರ್ಡಿಂಗ್ಸ್ ಜಾಹೀರಾತು ಪ್ರದರ್ಶನದ ವಿವರ (ಪ್ಯಾಕೇಜ್ ಸಂ: 01) | | | | | | | |
| 5 | ಹೊರಗಡೆ ಹೋರ್ಡಿಂಗ್ಸ್ (ಮುಖ್ಯ ರಸ್ತೆಗೆ) | U | 12X8 | 3 | 288 | ₹. 2,357/- | ₹. 7,071/- | ₹. 118/- |
| | ಒಳ ಆವರಣ ಹೋರ್ಡಿಂಗ್ಸ್ | V | 10X6 | 2 | 120 | | | |
| | ಕುರುಗೋಡು ಘಟಕದ ಹೊರಗಡೆ ತೆರೆದ ಜಾಗೆಗಳಲ್ಲಿ ಹೋರ್ಡಿಂಗ್ಸ್ ಜಾಹೀರಾತು ಪ್ರದರ್ಶನದ ವಿವರ (ಪ್ಯಾಕೇಜ್ ಸಂ: 01) | | | | | | | |
| 6 | ಕುರುಗೋಡು ಘಟಕದ ಮುಂಭಾಗದಲ್ಲಿ | W | 15X10 | 2 | 300 | ₹. 1,500/- | ₹. 4,500/- | ₹. 118/- |
| | ಕುಡುತಿನಿ ಬಸ್ ನಿಲ್ದಾಣದ ತೆರೆದ ಜಾಗೆಗಳಲ್ಲಿ ಹೋರ್ಡಿಂಗ್ಸ್ ಜಾಹೀರಾತು ಪ್ರದರ್ಶನದ ವಿವರ (ಪ್ಯಾಕೇಜ್ ಸಂ: 02) | | | | | | | |
| 7 | ಒಳ ಆವರಣ ಹೋರ್ಡಿಂಗ್ಸ್ | T2 | 12X8 | 3 | 288 | ₹. 2,376/- | ₹. 7,128/- | ₹. 118/- |
| | ತೆಕ್ಕಲಕೋಟೆ ಬಸ್ ನಿಲ್ದಾಣದ ತೆರೆದ ಜಾಗೆಗಳಲ್ಲಿ ಹೋರ್ಡಿಂಗ್ಸ್ ಜಾಹೀರಾತು ಪ್ರದರ್ಶನದ ವಿವರ (ಪ್ಯಾಕೇಜ್ ಸಂ: 01) | | | | | | | |
| 8 | ಹೊರಗಡೆ ಹೋರ್ಡಿಂಗ್ಸ್ (ಮುಖ್ಯ ರಸ್ತೆಗೆ) | Z8 | 15X10 | 4 | 600 | ₹. 6,930/- | ₹. 20,790/- | ₹. 118/- |
| | ಒಳ ಆವರಣ ಹೋರ್ಡಿಂಗ್ಸ್ | Z9 | 15X8 | 2 | 240 | | | |
| | ಮೋಕಾ ಬಸ್ ನಿಲ್ದಾಣದ ತೆರೆದ ಜಾಗೆಗಳಲ್ಲಿ ಹೋರ್ಡಿಂಗ್ಸ್ ಜಾಹೀರಾತು ಪ್ರದರ್ಶನದ ವಿವರ (ಪ್ಯಾಕೇಜ್ ಸಂ: 01) | | | | | | | |
| 9 | ಹೊರಗಡೆ ಹೋರ್ಡಿಂಗ್ಸ್ (ಮುಖ್ಯ ರಸ್ತೆಗೆ) | Z10 | 15X10 | 2 | 300 | ₹. 3,119/- | ₹. 9,357/- | ₹. 118/- |
| | ಒಳ ಆವರಣ ಹೋರ್ಡಿಂಗ್ಸ್ | Z11 | 15X8 | 2 | 240 | | | |
| | ಸಂಡೂರು ಬಸ್ ನಿಲ್ದಾಣದ ತೆರೆದ ಜಾಗೆಗಳಲ್ಲಿ ಹೋರ್ಡಿಂಗ್ಸ್ ಜಾಹೀರಾತು ಪ್ರದರ್ಶನದ ವಿವರ (ಪ್ಯಾಕೇಜ್ ಸಂ: 01) | | | | | | | |
| 10 | ಹೊರಗಡೆ ಹೋರ್ಡಿಂಗ್ಸ್ | - | 10X15 | 9 | 1350 | ₹. 7,574/- | ₹. 22,722/- | ₹. 118/- |
| | ಕಂಪ್ಲಿ ಬಸ್ ನಿಲ್ದಾಣದ ತೆರೆದ ಜಾಗೆಗಳಲ್ಲಿ ಹೋರ್ಡಿಂಗ್ಸ್ ಜಾಹೀರಾತು ಪ್ರದರ್ಶನದ ವಿವರ (ಪ್ಯಾಕೇಜ್ ಸಂ: 01) | | | | | | | |
| 11 | ಹೊರಗಡೆ ಹೋರ್ಡಿಂಗ್ಸ್ | - | 10X15 | 6 | 900 | ₹. 7,150/- | ₹. 21,450/- | ₹. 118/- |
| | ಕಂಪ್ಲಿ ಬಸ್ ನಿಲ್ದಾಣದ ತೆರೆದ ಜಾಗೆಗಳಲ್ಲಿ ಹೋರ್ಡಿಂಗ್ಸ್ ಜಾಹೀರಾತು ಪ್ರದರ್ಶನದ ವಿವರ (ಪ್ಯಾಕೇಜ್ ಸಂ: 02) | | | | | | | |
| 12 | ಒಳ ಆವರಣ (ಪಿಲ್ಲರ್ ಬೋರ್ಡ್ / ಗ್ಲೋಸೈನೇಜ್ ಬೋರ್ಡ್) | - | 4X5 | 6 | 120 | ₹. 686/- | ₹. 2,058/- | ₹. 118/- |

**ವಿಶೇಷ ಸೂಚನೆ** : ಕ್ರಮ ಸಂ: 01 ರಲ್ಲಿನ ಬಳ್ಳಾರಿ ನಗರ ಬಸ್ ನಿಲ್ದಾಣದಲ್ಲಿನ ಹೋರ್ಡಿಂಗ್ಸ್ ಜಾಹೀರಾತು ಪ್ರದರ್ಶನಕ್ಕಾಗಿ **₹. 1,11,000/-** ಗಳಿದ್ದು, ಸದರಿ ಹೋರ್ಡಿಂಗ್ಸ್ ಜಾಹೀರಾತು ಪ್ರದರ್ಶಿಸಲು ನಿಲ್ದಾಣದಲ್ಲಿನ ಗುರುತಿಸಿರುವ ಸ್ಥಳದಲ್ಲಿ ಅನುಪಯುಕ್ತ ಸ್ಥಳವನ್ನು ಕೈಬಿಡಲಾಗಿರುತ್ತದೆ. (10*5=50 ಚದರ ಅಡಿಯ 4 ಬೋರ್ಡ್‌ಗಳು = 200 ಚದರ ಅಡಿ) ಹೀಗಾಗಿ ಸದರಿ ಜಾಹೀರಾತಿಗಾಗಿ ನಿಗಧಿಪಡಿಸಿರುವ ಶುಲ್ಕ ₹. 1,11,000/- ಗಳಲ್ಲಿ ₹. 2,800/- ಗಳನ್ನು ಕಡಿತಗೊಳಿಸಿ ₹. 1,08,200/- ಗಳನ್ನು ನಿಗಧಿಪಡಿಸಲಾಗಿದೆ.

**ವಿಶೇಷ ಸೂಚನೆ** : ಕ್ರಮ ಸಂ: 02 ರಲ್ಲಿರುವ ಬಳ್ಳಾರಿ ನಗರ ಬಸ್ ನಿಲ್ದಾಣದ ಒಳ ಆವರಣದ ಜಾಹೀರಾತು ಪ್ರದರ್ಶನಕ್ಕಾಗಿ ಮ್ಯಾನುವಲ್ ಸಂಧಾನದ ಟೆಂಡರ್‌ನಲ್ಲಿ ಭಾಗವಹಿಸುವ ಬೇಡಿಕೆದಾರರು ನಿಲ್ದಾಣದ ಪ್ಲಾಟ್‌ಫಾರಂ ಬೋರ್ಡಗಳಲ್ಲಿ ("F" ರಲ್ಲಿ ತೋರಿಸಿರುವ ಬೋರ್ಡಗಳು) **ಶೇಕಡ 25% ರಷ್ಟು ಮಾತ್ರ** ಜಾಹೀರಾತು ಪ್ರದರ್ಶಿಸಲು ಅವಕಾಶವಿರುತ್ತದೆ. **ಇನ್ನುಳಿದ ಶೇಕಡ 75% ರಷ್ಟು ಸ್ಥಳದಲ್ಲಿ ನಿಲ್ದಾಣದಿಂದ ಇತರೆ ಸ್ಥಳಗಳಿಗೆ ನಿರ್ಗಮಿಸುವ ಬಸ್‌ಗಳ ವಿವರ ಅಥವಾ ಸಂಸ್ಥೆಯು ಸೂಚಿಸುವ ಮಾಹಿತಿಯನ್ನು ಪ್ರದರ್ಶಿಸುವುದು ಕಡ್ಡಾಯವಾಗಿರುತ್ತದೆ.**

**ವಿಶೇಷ ಸೂಚನೆ :** ಕ್ರಮ ಸಂ: 3, 4, 5 ಹಾಗೂ 08 ಮತ್ತು 09 ಗಳಲ್ಲಿನ ಬಸ್ ನಿಲ್ದಾಣಗಳಲ್ಲಿ ನಿಲ್ದಾಣದ ಹೊರಗಡೆ ಹಾಗೂ ಒಳಗಡೆಯಂತೆ ಪ್ರತ್ಯೇಕವಾಗಿ 2 ಪ್ಯಾಕೇಜ್‌ಗಳನ್ನು ನಿಗಧಿಪಡಿಸಲಾಗಿರುತ್ತದೆ. ಆದರೆ ಸದರಿ 2 ಪ್ಯಾಕೇಜ್‌ಗಳು ಹೋರ್ಡಿಂಗ್ಸ್ ಜಾಹೀರಾತುಗಳಾಗಿರುವುದರಿಂದ ಅವುಗಳನ್ನು ಒಟ್ಟುಗೂಡಿಸಿ ಒಂದೇ ಪ್ಯಾಕೇಜ್‌ನ್ನಾಗಿ ಮಾಡಲಾಗಿರುತ್ತದೆ. ಹಾಗೆಯೇ ಸದರಿ ಹೋರ್ಡಿಂಗ್ಸ್ ಜಾಹೀರಾತುಗಳ ದರಗಳನ್ನು ಸಹ ಒಟ್ಟುಗೂಡಿಸಿ ಮಾಸಿಕ ಪರವಾನಗಿ ಶುಲ್ಕವನ್ನಾಗಿ ನಿಗಧಿಪಡಿಸಲಾಗಿದೆ.

1) ಮೇಲಿನ ಮಳಿಗೆಗಳಲ್ಲಿ ನಿಗದಿಪಡಿಸಿದ ವ್ಯವಹಾರಗಳಲ್ಲದೆ ಕಾನೂನಿನ ಪ್ರಕಾರ ನಿಷೇಧಿಸಲ್ಪಟ್ಟ ಹಾಗೂ ಸಂಸ್ಥೆಯ ಹಿತಾಸಕ್ತಿಗೆ ಧಕ್ಕೆಯುಂಟು ಮಾಡುವ ವ್ಯವಹಾರಗಳನ್ನು ಹೊರತುಪಡಿಸಿ ತಮ್ಮ ಬೇಡಿಕೆಗಳನ್ನು ಸೂಚಿಸಿ ಟೆಂಡರ್‌ನಲ್ಲಿ ಭಾಗವಹಿಸಬಹುದು. ನಿಷೇಧಿಸಲ್ಪಟ್ಟ ವ್ಯವಹಾರಗಳ **ವಿವರ : ಟೂರಿಸ್ಟ್ ಟ್ರಾವೆಲ್ಸ್ ಏಜೆನ್ಸಿ, ಮದ್ಯಪಾನ ಅಂಗಡಿ, ಮಾಂಸದ ಮಾರಾಟ ಮಳಿಗೆ, ಮಾದಕ ವಸ್ತುಗಳ ವ್ಯಾಪಾರ, ಪಟಾಕಿ ಮತ್ತು ಸ್ಫೋಟಕ ವಸ್ತುಗಳ ಮಾರಾಟ, ವಾಯು ಮಾಲಿನ್ಯ ಉಂಟು ಮಾಡುವ ವಸ್ತುಗಳ ವ್ಯಾಪಾರ ಮತ್ತು ಟೆಂಡರ್ ಕಮಿಟಿಯ ನಿರ್ಣಯದಂತೆ ನಿಷೇಧಿಸಲ್ಪಟ್ಟ ವಸ್ತುಗಳ ಮಾರಾಟ**.

| ಕ್ರ ಸಂ | ವಿವರ | ದಿನಾಂಕ / ಸಮಯದ ಮಾಹಿತಿ |
|---|---|---|
| **ಮ್ಯಾನುವಲ್ ಸಂಧಾನ ಟೆಂಡರ್ ಪ್ರಕಟಣೆ ಸಂ: 04/2022 ಗೆ ನೇರವಾಗಿ ಸಂಧಾನದ ಮೂಲಕ ಭಾಗವಹಿಸಲು ಮಾಹಿತಿ** | | |
| 1 | ಟೆಂಡರ್‌ಗೆ ಸಂಬಂಧಿಸಿದ ಮಾಹಿತಿ ಹಾಗೂ ಅರ್ಜಿಗಳನ್ನು ಪಡೆಯಲು ಕೊನೆಯ ದಿನಾಂಕದ | **ದಿನಾಂಕ: 12-04-2022 ರ ಸಮಯದ 11-00 ಗಂಟೆಯವರೆಗೆ.** |
| 2 | ಭರ್ತಿ ಮಾಡಿದ ಅರ್ಜಿಯೊಂದಿಗೆ ಇ.ಎಂ.ಡಿ., /ಅರ್ಜಿ/ಜಿ.ಎಸ್.ಟಿ. ಶುಲ್ಕಗಳ ಮೂಲ ಡಿ.ಡಿ.ಗಳು & ಮೀಸಲಾತಿ ಪ್ರಮಾಣ ಪತ್ರ, ಇತರೆ ಅವಶ್ಯಕ ದಾಖಲೆಗಳನ್ನು ಕಚೇರಿಯಲ್ಲಿ ಸಲ್ಲಿಸುವ ಕೊನೆಯ ದಿನಾಂಕ | **ದಿನಾಂಕ: 12-04-2022 ರ ಸಮಯ 11-00 ಗಂಟೆಯವರೆಗೆ.** |
| 3 | ಮ್ಯಾನುವಲ್ ಸಂಧಾನದ ಟೆಂಡರ್ ನಡೆಸುವ ದಿನಾಂಕ. | **ದಿನಾಂಕ: 12-04-2022 ರಂದು ಸಮಯ 12:00 ಗಂಟೆಯ ನಂತರ.** |

2) ಒಂದು ವೇಳೆ ತಾಂತ್ರಿಕ ದೋಷದಿಂದ ನಿಗಧಿತ ದಿನಾಂಕದಂದು ನಡೆಸದಿದ್ದಲ್ಲಿ ಟೆಂಡರ್ ಸಮಯವನ್ನು ಮುಂದೂಡುವ ಅಧಿಕಾರವನ್ನು ಸಂಸ್ಥೆಯು ಕಾಯ್ದಿರಿಸಿಕೊಂಡಿದೆ. ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ, ಕ.ಕ.ರ.ಸಾ., ನಿಗಮ, ಬಳ್ಳಾರಿ ವಿಭಾಗ, ಬಳ್ಳಾರಿ ರವರಿಗೆ ಸಂಪರ್ಕಿಸಲು ಕೋರಲಾಗಿದ್ದು, ಸಂಪರ್ಕಿಸಬಹುದಾದ ದೂರವಾಣಿ ಸಂ: 77609 92152 (ವಿಭಾಗೀಯ ಸಂಚಾರ ಅಧಿಕಾರಿ) ಗೆ ಸಂಪರ್ಕಿಸಬಹುದಾಗಿದೆ.

3) ಮೇಲಿನ ತೆರೆದ ಜಾಗೆಗಳಲ್ಲಿ ಕಾನೂನಿನ ಪ್ರಕಾರ ನಿಷೇಧಿಸಲ್ಪಟ್ಟ ಹಾಗೂ ಸಂಸ್ಥೆಯ ಹಿತಾಸಕ್ತಿಗೆ ಧಕ್ಕೆಯುಂಟು ಮಾಡುವ ವ್ಯವಹಾರಗಳನ್ನು ಹೊರತುಪಡಿಸಿ ಆಯ್ಕೆಯಾಗಿರುವ ಪರವಾನಗಿದಾರರಿಗೆ ಜಾಹೀರಾತು ಪ್ರದರ್ಶಿಸಲು ಬರುವ ಬೇಡಿಕೆಗಳನ್ನು ಮಾತ್ರ ಪ್ರದರ್ಶಿಸಲು ಅವಕಾಶವಿರುತ್ತದೆ. ಒಂದು ವೇಳೆ ಕಾನೂನಿನ ಪ್ರಕಾರ ನಿಷೇಧಿಸಲ್ಪಟ್ಟ ಅಥವಾ ಸಂಸ್ಥೆಯ ಹಿತಾಸಕ್ತಿಗೆ ಧಕ್ಕೆಯುಂಟು ಮಾಡುವ ಅಥವಾ ಯಾವುದೇ ಪ್ರಚೋದನಾಕಾರಿಯಾಗಿರುವ ಜಾಹೀರಾತುಗಳನ್ನು ಅಥವಾ ಅಶ್ಲೀಲ ಜಾಹೀರಾತು ಪ್ರದರ್ಶನ, ಸಾರ್ವಜನಿಕ ಹಿತಾಸಕ್ತಿಗೆ ವಿರುದ್ಧವಾದ, ಅನೈತಿಕ ಗುಣವುಳ್ಳ, ವಿರೂಪ ಜಾಹೀರಾತು ಪೋಸ್ಟರ / ಮೂರ್ತಿಗಳನ್ನು ಪ್ರದರ್ಶಿಸತಕ್ಕದ್ದಲ್ಲ. ಒಂದು ವೇಳೆ ಈ ರೀತಿಯಾದ ಜಾಹೀರಾತುಗಳು ಪ್ರದರ್ಶಿಸಿರುವ ಬಗ್ಗೆ ಸಂಸ್ಥೆಗೆ ಮಾಹಿತಿ / ದೂರುಗಳು ಬಂದಲ್ಲಿ ಆಯ್ಕೆಯಾಗಿರುವ ಪರವಾಗನಿದಾರರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲಾಗುವುದು. **ಈ ವಿಷಯದಲ್ಲಿ ಸಂಸ್ಥೆಯ ನಿರ್ಧಾರವೇ ಅಂತಿಮವಾಗಿದ್ದು, ಅದಕ್ಕೆ ಜಾಹೀರಾತುದಾರರು ಬದ್ಧರಾಗಿರತಕ್ಕದ್ದು**.

4) ಬಿಡ್‌ದಾರರು ಜಾಹೀರಾತು ಪ್ಯಾಕೇಜ್‌ಗಳಿಗೆ ತಮ್ಮ ಬಿಡ್‌ನ್ನು ಸಲ್ಲಿಸುವ ಮೊದಲು ಆ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ ನಂತರವೇ ಬಿಡ್ ಮೊತ್ತವನ್ನು ದಾಖಲಿಸುವುದು ಬಿಡ್‌ದಾರರ ಜವಾಬ್ದಾರಿಯಾಗಿರುತ್ತದೆ. ಟೆಂಡರ್ ಪ್ರಕ್ರಿಯೆ ಮುಗಿದ ನಂತರ ಯಾವುದೇ ಕಾರಣಕ್ಕೂ ಜಾಹೀರಾತು ಸ್ಥಳವನ್ನು ಬದಲಾವಣೆ ಮಾಡಲು ಅವಕಾಶವಿರುವುದಿಲ್ಲ.

5) ಬಿಡ್‌ದಾರರು ಒಂದು ಜಾಹೀರಾತು ಪ್ಯಾಕೇಜ್‌ಗೆ ಒಂದಕ್ಕಿಂತ ಹೆಚ್ಚಿನ ಬಿಡ್‌ಗಳನ್ನು ಸಲ್ಲಿಸಲು ಅವಕಾಶವಿರುವುದಿಲ್ಲ.

6) ಜಾಹೀರಾತಿನಲ್ಲಿ ಪ್ರದರ್ಶಿಸುವ ವಿವರಗಳು ಅಡ್ವರ್‌ಟೈಸಿಂಗ್ ಸ್ಟ್ಯಾಂಡರ್ಡ್ ಕೌನ್ಸಿಲ್ ಆಫ್ ಇಂಡಿಯಾ ರವರ ನಿರ್ದೇಶನಗಳಿಗೆ (ASCI CODE) ಒಳಪಟ್ಟಿದ್ದು, ಇದಕ್ಕೆ ಜಾಹೀರಾತುದಾರರು ಬದ್ಧರಾಗಿರಬೇಕು.

7) ಜಾಹೀರಾತು / ಹೋರ್ಡಿಂಗ್ಸ್‌ಗಳಲ್ಲಿ ಸಂಸ್ಥೆಯ ಮತ್ತು ಇತರೆ ಸಹೋದರ ಸಂಸ್ಥೆಗಳ ವ್ಯವಹಾರಕ್ಕೆ ವ್ಯತಿರಿಕ್ತವಾದ / ಸಂಸ್ಥೆಯ ಘನತೆಗೆ ಧಕ್ಕೆ ತರುವಂತಹ ಜಾಹೀರಾತುಗಳನ್ನು ಪ್ರದರ್ಶಿಸುವಂತಿಲ್ಲ. ಇದಕ್ಕೆ ದೂರುಗಳು ಬಂದಲ್ಲಿ ನಿಯಮಾನುಸಾರ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

8) ಆಯ್ಕೆಗೊಂಡಿರುವ ಪರವಾನಿಗೆದಾರರು ಸಾಮಾನ್ಯ ಸ್ಥಾಯೀ ಆದೇಶ ಸಂ: 151/2017 ರಲ್ಲಿನ ಷರತ್ತು ಮತ್ತು ನಿಬಂಧನೆಗಳನ್ವಯ ಜಾಹೀರಾತು ಪ್ರದರ್ಶಿಸಲು ಬದ್ಧರಾಗಿರುತ್ತಾರೆ. ಹಾಗೆಯೇ ಜಾಹೀರಾತು ಪ್ರದರ್ಶಿಸುವ ಸಂಬಂಧ ಕಾಲಕಾಲಕ್ಕೆ ಸಂಸ್ಥೆಯು ಜಾರಿಗೆ ತರುವ ನಿಯಮಗಳನ್ನು ಪಾಲಿಸುವ/ಬದ್ಧರಾಗಿರುವ ಷರತ್ತಿಗೆ ಒಳಪಟ್ಟಿರುತ್ತದೆ.

I) **ಮ್ಯಾನುವಲ್ ಸಂಧಾನದಲ್ಲಿ ಸಲ್ಲಿಸಬೇಕಾದ ದಾಖಲೆಗಳು**: ಬೀಡದಾರರು ಕೆಳಕಂಡ ಅಗತ್ಯ ದಾಖಲೆಗಳನ್ನು ಸಲ್ಲಿಸಬೇಕಾಗಿರುತ್ತದೆ.

- ಪಾನ್ ಕಾರ್ಡ್
- ವಿಳಾಸ ದೃಢಿಕರಣ ಪ್ರಮಾಣ ಪತ್ರ (ಆಧಾರ ಕಾರ್ಡ, ಓಟರ್ ID, ಬ್ಯಾಂಕ್ ಪಾಸ್ ಬುಕ್, ಪಾಸಪೋರ್ಟ).
- ಬಿಡ್‌ದಾರರು ಪಾಲುದಾರಿಕೆ ವ್ಯವಹಾರ ಸಂಸ್ಥೆಯನ್ನು ಹೊಂದಿದಲ್ಲಿ, ಭಾರತೀಯ ಪಾಲುದಾರಿಕೆ ಕಾಯ್ದೆಯಡಿ ನೋಂದಣಿಯಾಗಿರುವ ದಾಖಲಾತಿ, ಬಿಡ್ ಸಹಿಗೊಳಸುವ ವ್ಯಕ್ತಿಯ ಪಾಲುದಾರಿಕೆಯ ಸಂಸ್ಥೆಯಲ್ಲಿ ವ್ಯವಸ್ಥಾಪಕ ಪಾಲುದಾರನಾಗಿರುವ ಬಗ್ಗೆ ದಾಖಲಾತಿಯನ್ನು ಸಲ್ಲಿಸಬೇಕು, ಪಾಲಿದಾರಿಕೆಯಲ್ಲಿರುವ ಎಲ್ಲಾ ನಿರ್ದೇಶಕರು/ಪಾಲುದಾರರ ಪೂರ್ಣ ವಿಳಾಸ ಸಲ್ಲಿಸುವುದು.
- ಬಿಡ್‌ದಾರರು ಕಂಪನಿ/ವ್ಯವಹಾರ ಸಂಸ್ಥೆಯ ಹೆಸರಿನಲ್ಲಿ ಬಿಡ್‌ಮಾಡಿದಲ್ಲಿ, ಕಂಪನಿಯ ಇಂಡಿಯನ್ ಕಂಪನೀಸ್ ಕಾಯ್ದೆಯಡಿಯಲ್ಲಿ ನೋದಣಿಯಾಗಿರುವ ದಾಖಲಾತಿಗಳನ್ನು ಸಲ್ಲಿಸಬೇಕು.

3.......

- ಬಿಡದಾರರು ಕ.ಕ.ರ.ಸಾ., ನಿಗಮ ಮತ್ತು ಇತರೆ ನಿಗಮಗಳಲ್ಲಿ DEFAULTER ಆಗದೆ ಇರುವ ಬಗ್ಗೆ ಹಾಗೂ ಕಪ್ಪು ಪಟ್ಟಿಗೆ ಸೇರಿಲ್ಲದಿರುವ ಬಗ್ಗೆ ಸ್ವಯಂ ದೃಢೀಕರಣ ಪತ್ರ ನೀಡಬೇಕಾಗಿರುತ್ತದೆ.
- ಮೀಸಲಾತಿ ಪಡೆಯುವ ಬಿಡ್‌ದಾರರು ಮೀಸಲಾತಿ ನಿಗದಿಪಡಿಸಿದ ಪ್ರಮಾಣ ಪತ್ರದ ಪ್ರತಿಯನ್ನು ಸಲ್ಲಿಸುವುದು.
- ಕಾಲಂ ಸಂ: 7 ರಲ್ಲಿ ತಿಳಿಸಿರುವ ಇ.ಎಂ.ಡಿ., ಶುಲ್ಕ ಹಾಗೂ ಕ್ರಮ ಸಂ: 8 ರಲ್ಲಿ ತಿಳಿಸಿರುವಂತೆ ಅರ್ಜಿ ಶುಲ್ಕ / ಜಿ.ಎಸ್.ಟಿ ಮೊತ್ತಕ್ಕೆ ರಾಷ್ಟ್ರೀಕೃತ ಬ್ಯಾಂಕಿನಿಂದ ಪಡೆದ ಡಿ.ಡಿ.ಯ ಮೂಲ ಪ್ರತಿ ಹಾಗೂ ಒಂದು ಛಾಯಾ ಪ್ರತಿಯನ್ನು ಸಲ್ಲಿಸುವುದು.
- ನಿಗದಿಪಡಿಸಿದ ಮೀಸಲಾತಿಯ ಪ್ರಮಾಣ ಪತ್ರವನ್ನು ಬಿಟ್ಟು ಬೇರೆ ಮೀಸಲಾತಿಯ ಪ್ರಮಾಣ ಪತ್ರದ ದಾಖಲಾತಿ ಮಾಡಿದಲ್ಲಿ ಅಂತಹ ಅರ್ಜಿಯನ್ನು ತಿರಸ್ಕರಿಸಿ ಟೆಂಡರ್‌ನಲ್ಲಿ ಪಾವತಿಸಿದ ಇ.ಎಂ.ಡಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
- ಈ ಪ್ರಕಟಣೆಯ ಮೂಲಕ ಟೆಂಡರ ಅರ್ಜಿ ಆಹ್ವಾನಿಸಿದ ಜಾಹೀರಾತು ಪ್ಯಾಕೇಜ್‌ಗಳ ಸಂಪೂರ್ಣ ವಿವರಗಳನ್ನು ಟೆಂಡರದಾರರು ಪಾಲಿಸಬೇಕಾದ ಷರತ್ತು/ ನಿಬಂಧನೆಗಳನ್ನು ಮತ್ತು ಅರ್ಹತಾ ಮಾನ ದಂಡಗಳ ಎಲ್ಲಾ ವಿವರಗಳನ್ನು ಸಂಪೂರ್ಣವಾಗಿ ಓದಿ ಅರ್ಥೈಸಿಕೊಂಡಿರುವುದಾಗಿ ಒಪ್ಪಿ ಅರ್ಜಿ ಸಲ್ಲಿಸುತ್ತಿರುವ ಕುರಿತು ನಿಗಧಿತ ನಮೂನೆಯಲ್ಲಿ ಮಾಹಿತಿಯನ್ನು ಭರ್ತಿಗೊಳಿಸಿ, ಸಹಿ **ಮಾಡಿ ಸಂಧಾನ ನಡೆಯುವ ಸಮಯದಲ್ಲಿ ಸಲ್ಲಿಸತಕ್ಕದ್ದು**.

**II) ಟೆಂಡರ/ಸಂಧಾನ ಅರ್ಜಿ ಶುಲ್ಕ :**

1) ಮಾಸಿಕ ಪರವಾನಗಿ ಶುಲ್ಕದ ಮೇಲೆ ಶೇಕಡ 1% ರಷ್ಟು ಕನಿಷ್ಠ ರೂ. 100.00 ರಿಂದ ಗರಿಷ್ಟ ರೂ. 3000.00 ಅರ್ಜಿ ಶುಲ್ಕವನ್ನು ಅನ್ವಯಿಸುವ GST ಸೇರಿಸಿ ಇ-ಟೆಂಡರ್/ ಮ್ಯಾನ್ಯುಯಲ್ ಸಂಧಾನಕ್ಕೆ ನಿಗದಿಪಡಿಸಿದೆ.

**III) ಇ.ಎಂ.ಡಿ ಮೊತ್ತ :**

1. ನಿಗದಿಪಡಿಸಿದ ಮಾಸಿಕ ಮಿತವ್ಯಯ ಪರವಾನಗಿ ಶುಲ್ಕದ ಮೂರು (03) ಪಟ್ಟು ಮೊತ್ತವನ್ನು ಇ.ಎಂ.ಡಿ.ಯನ್ನಾಗಿ (Earnest Money Deposit) ನಿಗದಿಪಡಿಸಿದೆ.
2. ಇ.ಎಂ.ಡಿ. ಮೊತ್ತಕ್ಕೆ ಯಾವುದೇ ಬಡ್ಡಿಯನ್ನು ನೀಡಲಾಗುವುದಿಲ್ಲ.
3. ಹೋರ್ಡಿಂಗ್ಸ್ ಸ್ಥಳಗಳಾಗಿ ಮ್ಯಾನುವಲ್ ಸಂಧಾನದ ಟೆಂಡರ್‌ಗೆ ಭಾಗವಹಿಸಲು ಇಚ್ಛಿಸಿರುವ ಬಿಡ್‌ದಾರರು ಪ್ರಕಟಣೆಯ ಕಾಲಂ ಸಂ: 07 ರಲ್ಲಿ ನಿಗಧಿಪಡಿಸಿರುವ ಇ.ಎಂ.ಡಿ., ಶುಲ್ಕ ಮತ್ತು ಕಾಲಂ ಸಂ: 08 ರಲ್ಲಿ ನಿಗಧಿಪಡಿಸಿರುವ ಅರ್ಜಿ/ಜಿ.ಎಸ್.ಟಿ. ಶುಲ್ಕಗಳಿಗೆ 2 ಪ್ರತ್ಯೇಕವಾದ ಡಿ.ಡಿ. ಗಳನ್ನು **ವಿಭಾಗೀಯ ನಿಯಂತ್ರಣಾಧಿಕಾರಿಗಳು, ಕಕರಸಾ ನಿಗಮ, ಬಳ್ಳಾರಿ ರವರ (DIVISIONAL CONTROLLER, KKRTC, BALLARI DIVISION)** ಹೆಸರಿಗೆ ರಾಷ್ಟ್ರೀಕೃತ ಬ್ಯಾಂಕನಿಂದ ಪಡೆದ ಡಿ.ಡಿ.ನ್ನು ಟೆಂಡರ್ ನಡೆಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಬೆಳಗ್ಗೆ 11:00 ಗಂಟೆಯೊಳಗಾಗಿ ಸಂಚಾರ ಶಾಖೆಯಲ್ಲಿ ಸಲ್ಲಿಸುವುದು. ತಡವಾಗಿ ಬಂದ ದಾಖಲಾತಿಗಳು/ ಅರ್ಜಿ /ಮನವಿ/ಡಿ.ಡಿಗಳನ್ನು ಸ್ವೀಕರಿಸಲಾಗುವುದಿಲ್ಲ. ಅಂತಹ ಅರ್ಜಿದಾರರ ಸಂಧಾನದ ಅರ್ಜಿ / ಬೇಡಿಕೆಯನ್ನು ತಿರಸ್ಕರಿಸಲಾಗುವುದು.

**IV) ಪರವಾನಗಿ ಅವಧಿ:** ಐದು (05) ವರ್ಷಗಳು

**V) ಟೆಂಡರ್ ಮಾನ್ಯತಾ ಅವಧಿ:** ಒಂದು ವೇಳೆ ನಿಗದಿಪಡಿಸಿದ ಮಾನ್ಯತಾ ಅವಧಿಯಲ್ಲಿ ಟೆಂಡರ್ ಪ್ರಕ್ರಿಯೆಯನ್ನು ಮುಕ್ತಾಯಗೊಳಿಸಲು ಸಾಧ್ಯವಾಗದಿದ್ದಲ್ಲಿ, ಟೆಂಡರ್ ಮಾನ್ಯತಾ ಅವಧಿಯನ್ನು ಬಿಡ್‌ದಾರರಿಂದ ಸಹಮತಿ ಪತ್ರ ಪಡೆದುಕೊಂಡು ವಿಸ್ತರಿಸುವ ಅಧಿಕಾರವನ್ನು ಸಂಸ್ಥೆ ಹೊಂದಿರುತ್ತದೆ.

**VI) ಜಾಹೀರಾತು ಪ್ಯಾಕೇಜ್‌ಗೆ ಮ್ಯಾನುವಲ್ ಸಂಧಾನದ** ಟೆಂಡರ್ ಕರೆಯಲಾಗಿದ್ದು, ಅಗತ್ಯವಿದ್ದಲ್ಲಿ ಆಸಕ್ತದಾರರೊಂದಿಗೆ ಪೂರ್ವಭಾವಿ (Pre-Bid) ಸಭೆ ನಡೆಸಲು ಸಂಸ್ಥೆಯು ತಮ್ಮ ಅಧಿಕಾರವನ್ನು ಕಾಯ್ದಿರಿಸಿಕೊಳ್ಳಲಾಗಿದೆ.

**VII) ಬಿಡ್‌ದಾರರು ಕೆಳಕಂಡ ಅಗತ್ಯ ದಾಖಲೆಗಳನ್ನು ಸಂಧಾನದಲ್ಲಿ ಸಲ್ಲಿಸತಕ್ಕದ್ದು.**

| **ರೂ. 5.00 ಲಕ್ಷಕ್ಕಿಂತ ಕಡಿಮೆ ಮಾಸಿಕ ಪರವಾನಗಿ ಶುಲ್ಕವಿರುವ ಜಾಹೀರಾತು ಪ್ಯಾಕೇಜ್‌ಗಳಿಗೆ** | **ರೂ. 5.00 ಲಕ್ಷ ಅಥವಾ ಹೆಚ್ಚಿನ ಮಾಸಿಕ ಪರವಾನಗಿ ಶುಲ್ಕವಿರುವ ಜಾಹೀರಾತು ಪ್ಯಾಕೇಜ್‌ಗಳಿಗೆ** |
|---|---|
| ಅ) ವಿಳಾಸ ದೃಢೀಕರಣ ಪತ್ರ (Voter ID, Adhaar Card, Bank Pass Book, Passport, etc.,).<br>ಆ) ಬಿಡ್‌ದಾರರು ಪಾಲುದಾರಿಗೆ ವ್ಯವಹಾರ ಸಂಸ್ಥೆಯನ್ನು ಹೊಂದಿದಲ್ಲಿ, ಭಾರತೀಯ ಪಾಲುದಾರಿಕೆ ಕಾಯ್ದೆಯಡಿ ಯಲ್ಲಿ ನೋಂದಣಿಯಾಗಿರುವ ದಾಖಲಾತಿ, ಬಿಡ್ ಸಹಿಗೊಳಿಸುವ ವ್ಯಕ್ತಿಯು ಪಾಲುದಾರಿಕಯ ಸಂಸ್ಥೆಯಲ್ಲಿ ವ್ಯವಸ್ಥಾಪಕ ಪಾಲುದಾರನಾಗಿರುವ ಬಗ್ಗೆ ದಾಖಲಾತಿಯನ್ನು ಸಲ್ಲಿಸಬೇಕು. ಪಾಲುದಾರಿಕೆಯಲ್ಲಿರುವ ಎಲ್ಲಾ ನಿರ್ದೇಶಕರು/ಪಾಲುದಾರರ ಪೂರ್ಣ ವಿಳಾಸದ ಮಾಹಿತಿಯನ್ನು ಸಲ್ಲಿಸಬೇಕು.<br>ಇ) ಬಿಡ್‌ದಾರರು ಕಂಪನಿ/ವ್ಯವಹಾರ ಸಂಸ್ಥೆಯ ಹೆಸರಿನಲ್ಲಿ ಬಿಡ್ ಮಾಡಿದ್ದಲ್ಲಿ, ಕಂಪನಿಯು ಇಂಡಿಯನ್ ಕಂಪನೀಸ್ ಕಾಯ್ದೆಯಡಿಯಲ್ಲಿ ನೋಂದಣಿ ಯಾಗಿರುವ ದಾಖಲಾತಿಯನ್ನು ಸಲ್ಲಿಸಬೇಕು.<br>ಈ) ಬಿಡ್‌ದಾರರು ಕಕರಸಾ ನಿಗಮ ಮತ್ತು ಇತರೆ ನಿಗಮಗಳಲ್ಲಿ Defaulter ಆಗದೆ ಇರುವ ಬಗ್ಗೆ ಹಾಗೂ ಕಪ್ಪು ಪಟ್ಟಿಗೆ ಸೇರಿಲ್ಲದಿರುವ ಬಗ್ಗೆ ಸ್ವಯಂ ದೃಢೀಕರಣ ಪತ್ರ. | ಅ) ಕಂಪನಿ/ವ್ಯಕ್ತಿಯ ವಿಳಾಸ ದೃಢೀಕರಣ ಪತ್ರ (Voter ID, Adhaar Card, Bank Pass Book, Passport, etc.,).<br>ಆ) ಆದಾಯ ತೆರಿಗೆ ತಿರುವಳಿ ಪತ್ರ.<br>ಇ) ಜಾಹೀರಾತು ಉದ್ಯಮದಲ್ಲಿ ಕನಿಷ್ಠ 2 ವರ್ಷಗಳ ಅನುಭವ ಪತ್ರ (ಕೆಲಸದ ಆದೇಶದ ಪತ್ರ).<br>ಈ) ಹಿಂದಿನ 2 ವರ್ಷಗಳ ಅವಧಿಯಲ್ಲಿ ಮಿತವ್ಯಯ ಪರವಾನಿಗೆ ಶುಲ್ಕದ ಶೇಕಡ 10 ರಷ್ಟು ಮಾಸಿಕ ವಾಹಿವಾಟಿನ ದಾಖಲೆಗಳನ್ನು ಲೆಕ್ಕ ಪರಶೋದಕದಿಂದ ದೃಢೀಕರಿಸಿ ನೀಡುವುದು.<br>ಉ) ಬಿಡ್‌ದಾರರು ಪಾಲುದಾರಿಕೆ ವ್ಯವಹಾರ ಸಂಸ್ಥೆಯನ್ನು ಹೊಂದಿದಲ್ಲಿ, ಭಾರತೀಯ ಪಾಲುದಾರಿಗೆ ಕಾಯ್ದೆಯಡಿಯಲ್ಲಿ ನೋಂದಣಿಯಾಗಿರುವ ದಾಖಲಾತಿ, ಬಿಡ್ ಸಹಿಗೊಳಿಸುವ ವ್ಯಕ್ತಿಯು ಪಾಲುದಾರಿಕೆಯ ಸಂಸ್ಥೆಯಲ್ಲಿ ವ್ಯವಸ್ಥಾಪಕ ಪಾಲುದಾರನಾಗಿರುವ ಬಗ್ಗೆ ದಾಖಲೆಗಳನ್ನು ಸಲ್ಲಿಸಬೇಕು. ಪಾಲುದಾರಿಕೆಯಲ್ಲಿರುವ ಎಲ್ಲಾ ನಿರ್ದೇಶಕರು/ಪಾಲುದಾರರ ಪೂರ್ಣ ವಿಳಾಸದ ಮಾಹಿತಿಯನ್ನು ಸಲ್ಲಿಸುಬೇಕು.<br>ಊ) ಬಿಡ್‌ದಾರರು ಕಂಪನಿ / ವ್ಯವಹಾರ ಸಂಸ್ಥೆಯ ಹೆಸರಿನಲ್ಲಿ ಬಿಡ್ ಮಾಡಿದ್ದಲ್ಲಿ, ಕಂಪನಿಯು ಇಂಡಿಯನ್ ಕಂಪನೀಸ್ ಕಾಯ್ದೆಯಡಿಯಲ್ಲಿ ನೋಂದಣಿಯಾಗಿರುವ ದಾಖಲಾತಿಯನ್ನು ಸಲ್ಲಿಸಬೇಕು.<br>ಋ) ವಹಿವಾಟಿಗೆ ಪೂರಕವಾಗಿ ಕಳೆದ 2 ವರ್ಷದ ಲಾಭ/ನಷ್ಟದ ಲೆಕ್ಕಾಚಾರದ ದಾಖಲೆಗಳು & ಬ್ಯಾಲೆನ್ಸ್ ಶೀಟ್ ಪ್ರತಿಗಳನ್ನು ಲೆಕ್ಕ ಪರಿಶೋಧಕರಿಂದ ದೃಢೀಕರಿಸಿ ನೀಡುವುದು.<br>ಎ) ಬಿಡ್‌ದಾರರು ಕಕರಸಾ ನಿಗಮ ಮತ್ತು ಇತರೆ ನಿಗಮಗಳಲ್ಲಿ Defaulter ಆಗದೆ ಇರುವ ಬಗ್ಗೆ ಹಾಗೂ ಕಪ್ಪು ಪಟ್ಟಿಗೆ ಸೇರಿಲ್ಲದಿರುವ ಬಗ್ಗೆ ಸ್ವಯಂ ದೃಢೀಕರಣ ಪತ್ರ. |

**VIII) ಆಯ್ಕೆ ವಿಧಾನ :**

1) ಮ್ಯಾನುವಲ್ ಸಂಧಾನದ ಮುಖಾಂತರ ಟೆಂಡರಗಳನ್ನು ಆಹ್ವಾನಿಸಿರುವ ಜಾಹೀರಾತು ಪ್ಯಾಕೇಜ್‌ಗಳಿಗೆ ನಿಗಧಿಪಡಿಸಿದ ಮಿತವ್ಯಯ ಮಾಸಿಕ ಪರವಾನಿಗೆ ಶುಲ್ಕಕ್ಕಿಂತ ಅತೀ ಹೆಚ್ಚಿನ ಮೊತ್ತವನ್ನು ಬಿಡ್ ಮಾಡಿರುವ ಬಿಡ್‌ದಾರರನ್ನು (H-1) ಪರವಾನಿಗೆದಾರನ್ನಾಗಿ ಆಯ್ಕೆ ಮಾಡಲಾಗುವುದು.

2) ಮ್ಯಾನುವಲ್ ಸಂಧಾನದಲ್ಲಿ ನಿಗದಿತ ಮಾಸಿಕ ಪರವಾನಿಗೆ ಶುಲ್ಕಕ್ಕಿಂತ ಹೆಚ್ಚಿನ ಮೊತ್ತವನ್ನು H-1 & H-2 ಗಳಂತೆ ಬಿಡ್ ನಮೂದಾಗಿ H-1 ಬಿಡ್‌ದಾರರು ಕರಾರು ಒಪ್ಪಂದ ಮಾಡಿಕೊಳ್ಳಲು ಹಿಂದೆ ಸರಿದಲ್ಲಿ/ವಿಫಲರಾದಲ್ಲಿ, ಸದರಿಯವರ ಇ.ಎಂ.ಡಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಂಡು H-2 ಬಿಡ್‌ದಾರರನ್ನು ಆಯ್ಕೆ ಮಾಡಲು ಕ್ರಮ ಕೈಕೊಳ್ಳಲಾಗುವುದು.

3) H-2 ಬಿಡ್‌ದಾರರನ್ನು ಪರವಾನಿಗೆದಾರನ್ನಾಗಿ ಆಯ್ಕೆ ಮಾಡುವಾಗ H-1 ಬಿಡದಾರರು ಬಿಡ್ ಮಾಡಿದ ಮೊತ್ತಕ್ಕೆ ಸಮನಾಗಿ ಪರವಾನಿಗೆ ಶುಲ್ಕವನ್ನು ನೀಡಬೇಕಾಗಿರುತ್ತದೆ. ಇದಕ್ಕೆ ಒಪ್ಪದೆ ಇದ್ದಲ್ಲಿ ಕೇಂದ್ರ ಕಚೇರಿಯ ವಾಣಿಜ್ಯ ಮುಖ್ಯಸ್ಥರಿಗೆ ಪ್ರಸ್ತಾವನೆಯನ್ನು ಕಳುಹಿಸಲಾಗುವುದು. ಕೇಂದ್ರ ಕಚೇರಿಯ ವಾಣಿಜ್ಯ ಮುಖ್ಯಸ್ಥರ ತಿರ್ಮಾನವೇ ಅಂತಿಮವಾಗಿರುತ್ತದೆ.

4) ಮ್ಯಾನುವಲ್ ಸಂಧಾನದಲ್ಲಿ ಒಂದಕ್ಕಿಂತ ಹೆಚ್ಚಿನ ಬಿಡ್‌ದಾರರು ಒಂದೇ ಮೊತ್ತವನ್ನು ನಮೂದಿಸಿದಲ್ಲಿ ಅಂತಹ ಬಿಡ್‌ದಾರರೊಂದಿಗೆ ಸಂಧಾನವನ್ನು ನಡೆಸಿ, ಹೆಚ್ಚಿನ ಮೊತ್ತವನ್ನು ನಮೂದಿಸಿದಂತಹ ಬಿಡ್‌ದಾರರನ್ನು ಪರವಾನಿಗೆದಾರನ್ನಾಗಿ ಆಯ್ಕೆ ಮಾಡಲಾಗುವುದು.

**IX) ಭದ್ರತಾ ಠೇವಣಿ :**

1. **ಅಂಗೀಕೃತ ಮಾಸಿಕ ಪರವಾನಗಿ ಶುಲ್ಕದ 8 ಪಟ್ಟು ಮೊತ್ತವನ್ನು ಭದ್ರತಾ ಠೇವಣಿ ರೂಪದಲ್ಲಿ ಭರಿಸುವುದು.**
2. ಭದ್ರತಾ ಠೇವಣಿಗೆ ಯಾವುದೇ ಬಡ್ಡಿಯನ್ನು ನೀಡಲಾಗುವುದಿಲ್ಲ.
3. ಆಯ್ಕೆಗೊಂಡ ಪರವಾನಗಿದಾರರು ಇ.ಎಂ.ಡಿ. ಮೊತ್ತವನ್ನು ಭದ್ರತಾ ಠೇವಣಿಗೆ ಹೊಂದಾಣಿಕೆ ಮಾಡಿಕೊಂಡು, ಉಳಿಕೆ ಮೊತ್ತವನ್ನು ಪಾವತಿಸಬಹುದಾಗಿದೆ.
4. ಪರವಾನಗಿ ಅವಧಿ ಮುಕ್ತಾಯವಾದ ನಂತರ ಸಂಸ್ಥೆಗೆ ಪಾವತಿಸಬೇಕಾದ ಬಾಕಿ ಶುಲ್ಕಗಳನ್ನು ಕಡಿತಗೊಳಿಸಿ ಉಳಿದ ಭದ್ರತಾ ಠೇವಣಿಯನ್ನು ಪರವಾನಗಿದಾರರಿಗೆ ಹಿಂತಿರುಗಿಸಲಾಗುವುದು.

**X) ಕರಾರು ಒಪ್ಪಂದ :**

1. ಆಯ್ಕೆಯಾದ ಬಿಡ್‌ದಾರರು, ಆಯ್ಕೆ ಪತ್ರ ತಲುಪಿದ ದಿನಾಂಕದಿಂದ 07 ದಿನದೊಳಗಾಗಿ ನಿಗದಿತ ಭದ್ರತಾ ಠೇವಣಿ ಮತ್ತು ಒಂದು ತಿಂಗಳ ಮುಂಗಡ ಮಾಸಿಕ ಪರವಾನಗಿ ಶುಲ್ಕ, ಸರಕು ಮತ್ತು ಸೇವಾ ತೆರಿಗೆಯನ್ನು ಪಾವತಿಸಿ, ಸೂಕ್ತ ಮೌಲ್ಯದ ಛಾಪಾ ಕಾಗದದ ಮೇಲೆ ಕರಾರು ಒಪ್ಪಂದ ಮಾಡಿಕೊಳ್ಳುವುದು.
2. ಆಯ್ಕೆಯಾದ ಬಿಡ್‌ದಾರರು, ಆಯ್ಕೆ ಪತ್ರ ತಲುಪಿದ 07 ದಿನದೊಳಗೆ ಕರಾರು ಒಪ್ಪಂದ ಮಾಡಿಕೊಳ್ಳುವಲ್ಲಿ ವಿಫಲರಾದಲ್ಲಿ, ಅಂತಹ ಬಿಡ್‌ದಾರರ ಇ.ಎಂ.ಡಿ. ಮೊತ್ತವನ್ನು ಸಂಸ್ಥೆಗೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
3. ಜಾಹೀರಾತು ಪ್ಯಾಕೇಜ್‌ಗಳಿಗೆ ಆಯ್ಕೆಯಾದ ಪರವಾನಗಿದಾರರು ಕರ್ನಾಟಕ ಸ್ಟಾಂಪ್ ಆ್ಯಕ್ಟ್-2010 ರನ್ವಯ ಒಂದು ವರ್ಷ ಮೀರುವ ಮತ್ತು 10 ವರ್ಷ ಮೀರದೆ ಇರುವ ಪರವಾನಗಿ ಅವಧಿಗೆ, ಒಟ್ಟು ಪರವಾನಗಿ ಶುಲ್ಕದ (ಪ್ರತಿ ವರ್ಷ ಶೇಕಡ 10% ರಷ್ಟು ಹೆಚ್ಚಳ ಸೇರಿದಂತೆ) ಸರಾಸರಿ ಮೊತ್ತದ ಮೇಲೆ ಶೇಕಡ 1% ರಷ್ಟು ಹಾಗೂ ಭದ್ರತಾ ಠೇವಣಿ ಮೊತ್ತದ ಮೇಲೆ ಶೇಕಡ 1% ರಷ್ಟು ಸ್ಟಾಂಪ್ ಶುಲ್ಕವನ್ನು ಪಾವತಿಸಿ ಸಂಸ್ಥೆಯೊಂದಿಗೆ ಕರಾರು ಒಪ್ಪಂದ ಮಾಡಿಕೊಳ್ಳುವುದು ಕಡ್ಡಾಯವಾಗಿರುತ್ತದೆ.
4. ಮಾಸಿಕ ಪರವಾನಿಗೆ ಶುಲ್ಕ, ಸರಕು & ಸೇವಾ ತೆರಿಗೆ ಮತ್ತು ಇತರೆ ಶುಲ್ಕಗಳನ್ನು ಸತತವಾಗಿ 2 ತಿಂಗಳು ಪಾವತಿಸದೆ ಬಾಕಿ ಉಳಿಸಿಕೊಂಡಲ್ಲಿ ಅಂತಹ ಜಾಹೀರಾತು ಪ್ಯಾಕೇಜ್‌ಗಳಿಗೆ ಆಯ್ಕೆಯಾಗಿರುವ ಪರವಾನಿಗೆಯನ್ನು ಸಂಸ್ಥೆಯ ವತಿಯಿಂದ ರದ್ದುಪಡಿಸಿ, ಪರವಾನಿಗೆದಾರರು ಸಂಸ್ಥೆಯಲ್ಲಿಟ್ಟಿರುವ ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳಲು ಕ್ರಮ ಕೈಕೊಳ್ಳಲಾಗುವುದು.

**XI) ಮಾಸಿಕ ಪರವಾನಗಿ ಶುಲ್ಕ ಮತ್ತು ಸೇವಾ ತೆರಿಗೆ ಪಾವತಿ :**

1. ಪರವಾನಗಿದಾರರು ಪ್ರತಿ ಮಾಹೆ 07 ನೇ ತಾರೀಖಿನೊಳಗಾಗಿ ಮಾಸಿಕ ಪರವಾನಗಿ ಶುಲ್ಕ ಮತ್ತು ಸರಕು & ಸೇವಾ ತೆರಿಗೆ ಶುಲ್ಕವನ್ನು (ಪ್ರಸ್ತುತ ಶೇಕಡ 18%), ಮುಂಗಡವಾಗಿ ಸಂಸ್ಥೆಗೆ ಪಾವತಿಸಬೇಕು.
2. ಇನ್‌ವಾಯ್ಸ್‌ನಲ್ಲಿ ನಮೂದಿಸಿದ ಪೂರ್ಣ ಮೊತ್ತವನ್ನು ಪರವಾನಗಿದಾರರು ಪಾವತಿಸಬೇಕಿರುತ್ತದೆ. ಒಂದು ವೇಳೆ ಇನ್‌ವಾಯ್ಸ್ ಮೊತ್ತ ಪಾವತಿಸಲು ಪರವಾನಗಿದಾರರು ತಡಮಾಡಿದಲ್ಲಿ, ಬಾಕಿ ಪರವಾನಗಿ ಶುಲ್ಕ ಮತ್ತು ಸರಕು & ಸೇವಾ ತೆರಿಗೆ ಮೇಲೂ ವಾರ್ಷಿಕ ಶೇಕಡ 18% ರಷ್ಟು ಬಡ್ಡಿಯನ್ನು ಕನಿಷ್ಠ ₹. 100/- ರಂತೆ, ವಿಳಂಬದ ದಿನಗಳ ಲೆಕ್ಕದಲ್ಲಿ ವಿಧಿಸಲಾಗುವುದು.
3. ಪರವಾನಗಿದಾರರು GST ನೋದಣಿ ಮತ್ತು ಇದಕ್ಕೆ ಪೂರಕವಾದ ದಾಖಲೆಗಳನ್ನು ಲಭ್ಯವಿದ್ದಲ್ಲಿ ಸಲ್ಲಿಸುವುದು.
4. ಮಾಸಿಕ ಪರವಾನಗಿ ಶುಲ್ಕ, ಸರಕು & ಸೇವಾ ತೆರಿಗೆ ಮತ್ತು ಇತರೆ ಶುಲ್ಕಗಳನ್ನು ಸಂಬಂಧಿಸಿದ ವಿಭಾಗ/ಘಟಕ/ಬಸ್ ನಿಲ್ದಾಣದ ಲೆಕ್ಕ ಪತ್ರ ಶಾಖೆಯಲ್ಲಿ DD (ರಾಷ್ಟ್ರೀಕೃತ/ಶೆಡ್ಯೂಲ್ ಬ್ಯಾಂಕುಗಳ)/ RGS /NEFT ಮೂಲಕ ಪಾವತಿಸುವುದು.
5. ಮಾಸಿಕ ಪರವಾನಗಿ ಶುಲ್ಕವು ಪ್ರತಿ ವರ್ಷ ಶೇಕಡ 10% ರಷ್ಟು ಹೆಚ್ಚಳವಾಗುವುದು. ಇದಕ್ಕನುಗುಣವಾಗಿ ಸರಕು ಮತ್ತು ಸೇವಾ ತೆರಿಗೆಯು ಹೆಚ್ಚಳವಾಗುವುದು. ಈ ಕುರಿತು ಕಾಲಕಾಲಕ್ಕೆ ರಾಜ್ಯ / ಕೇಂದ್ರ ಸರ್ಕಾರಗಳು ಹೊರಡಿಸುವ ಆದೇಶಕ್ಕೆ ಬದ್ಧರಾಗಿರಬೇಕಾಗಿರುತ್ತದೆ.
6. ಮುಷ್ಕರ/ಬಂದ್ ಅವಧಿಯಲ್ಲಿ ಮಾಸಿಕ ಪರವಾನಿಗೆ ಶುಲ್ಕದಲ್ಲಿ ರಿಯಾಯಿತಿಗೆ ಅವಕಾಶಗಳಿರುವುದಿಲ್ಲ.

**XII) ವಿದ್ಯುಚ್ಛಕ್ತಿ ಹಾಗೂ ನೀರಿನ ಬಿಲ್ಲುಗಳ ಪಾವತಿ :**

1. ಆಯ್ಕೆಯಾಗುವ ಪರವಾನಗಿದಾರರು ಜಾಹೀರಾತುಗಳನ್ನು ತಮ್ಮ ಸ್ವಂತ ಖರ್ಚಿನಲ್ಲಿ ಅಳವಡಿಸಿಕೊಳ್ಳಬೇಕು. ಇದಕ್ಕಾಗಿ ಪ್ರತ್ಯೇಕವಾಗಿ ವಿದ್ಯುಚ್ಛಕ್ತಿ ಮೀಟರ್‌ನ್ನು ಅಳವಡಿಸುವುದು.
2. ಆಯ್ಕೆಯಾಗುವ ಪರವಾನಗಿದಾರರು ಪ್ರತಿ ಮಾಹೆಯ ವಿದ್ಯುಚ್ಛಕ್ತಿ ಹಾಗೂ ನೀರಿನ ಬಿಲ್ಲುಗಳನ್ನು ನಿಗಧಿತ ಸಮಯದಲ್ಲಿ ಪಾವತಿಸಬೇಕು.

3. ವಿದ್ಯುತ್ ಸಂಪರ್ಕ ಅಳವಡಿಕೆಗಾಗಿ ತಗಲುವ ವೆಚ್ಚವನ್ನು ಪರವಾನಿಗೆದಾರರೇ ಭರಿಸತಕ್ಕದ್ದು. ಪರವಾನಿಗೆದಾರರು ಪ್ರತ್ಯೇಕ ವಿದ್ಯುತ್ ಮೀಟರ ಸಂಪರ್ಕ ಅಳವಡಿಸಿಕೊಳ್ಳುವುದು ಹಾಗೂ ಅದಕ್ಕೆ ತಗಲುವ ವೆಚ್ಚವನ್ನು ಪರವಾನಿಗೆದಾರರೇ ಭರಿಸತಕ್ಕದ್ದು. ಒಂದು ವೇಳೆ ವಿದ್ಯುತ್ ಸಂಪರ್ಕವನ್ನು ಸಂಸ್ಥೆಯ ವತಿಯಿಂದ ಒದಗಿಸಿದ್ದಲ್ಲಿ ಸಂಸ್ಥೆಯು ಸೂಚಿಸುವ ವಿದ್ಯುತ್ ಬಿಲ್‌ನ್ನು ತಪ್ಪದೇ ಭರಿಸಬೇಕಾಗಿರುತ್ತದೆ.

**XIII) ಹೆಚ್ಚುವರಿ ಸ್ಥಳಾವಕಾಶ:**

1. ಪರವಾನಿಗೆದಾರರು ಟೆಂಡರ್/ಕರಾರು ಒಪ್ಪಂದದಲ್ಲಿ ನಮೂದಿಸಿದ ಸ್ಥಳದ ವಿಸ್ತೀರ್ಣಕ್ಕಿಂತ ಜಾಹೀರಾತು ರಚನೆ / ವಿನ್ಯಾಸಕ್ಕೆ ಹೊಂದಿಕೊಂಡಂತೆ ಇರುವ ಹೆಚ್ಚುವರಿ ಸ್ಥಳವನ್ನು ಬಳಸಲು ಉದ್ದೇಶಿಸಿ, ವಿಭಾಗೀಯ ನಿಯಂತ್ರಣಾಧಿಕಾರಿಗಳಿಗೆ ಮನವಿ ನೀಡಿದ್ದಲ್ಲಿ, ಟೆಂಡರ್/ಕರಾರು ಒಪ್ಪಂದದಲ್ಲಿ ನಮೂದಿಸಿದ ವಿಸ್ತೀರ್ಣದ ಶೇಕಡ 10% ರಷ್ಟು ವಿಸ್ತೀರ್ಣದ ಸ್ಥಳವನ್ನು ಪ್ರಸ್ತುತ ಪಾವತಿಸುತ್ತಿರುವ ಪ್ರತಿ ಚದರ ಅಡಿಗೆ ಪರವಾನಗಿ ಶುಲ್ಕದ 1.5 ಪಟ್ಟು ಮೊತ್ತವನ್ನು ಮಾಸಿಕ ಪರವಾನಗಿ ಶುಲ್ಕವನ್ನಾಗಿ ನಿಗಧಿಪಡಿಸಿ ಒದಗಿಸುವುದು.
2. ಪರವಾನಗಿದಾರರು ಹೆಚ್ಚುವರಿ ಸ್ಥಳದ ಬೇಡಿಕೆಯನ್ನು ನೀಡಿದ್ದಲ್ಲಿ, ಅದನ್ನು ನಿಯಮಾನುಸಾರ ಪರಿಶೀಲಿಸಿ, ಕೇಂದ್ರ ಕಚೇರಿಯಿಂದ ಅನುಮೋದನೆ ಪಡೆದ ನಂತರ ಹೆಚ್ಚುವರಿ ಸ್ಥಳವನ್ನು ನೀಡಲಾಗುವುದು. ಒಂದು ವೇಳೆ ಪರವಾನಗಿದಾರರು ಸಂಸ್ಥೆಯಿಂದ ಅನುಮತಿ ಪಡೆದು ಹೆಚ್ಚುವರಿ ಸ್ಥಳವನ್ನು ಉಪಯೋಗಿಸಿದ್ದಲ್ಲಿ, ಸದರಿ ಹೆಚ್ಚುವರಿ ಸ್ಥಳವು ಸಾರ್ವಜನಿಕ ಪ್ರಯಾಣಿಕರಿಗೆ ಹಾಗೂ ಸಂಚರಿಸುವ ವಾಹನಗಳಿಗೆ ಯಾವುದೇ ಅಡಚಣೆ ಉಂಟಾಗದಂತೆ ಎಚ್ಚರ ವಹಿಸುವುದು.

**XIV) ಅನಧಿಕೃತವಾಗಿ ಹೆಚ್ಚುವರಿ ಸ್ಥಳಾವಕಾಶದ ಬಳಕೆ :**

ಪರವಾನಿಗೆದಾರರು ಅನಧಿಕೃತವಾಗಿ ಬಳಸಿದ ಹೆಚ್ಚುವರಿ ಸ್ಥಾವಕಾಶವನ್ನು ನೋಟಿಸ್ ನೀಡಿದ ಕೂಡಲೇ ತೆರವುಗೊಳಸಬೇಕು. ಇದಲ್ಲದೆ, ಪರವಾನಿಗೆದಾರರಿಗೆ ಕೆಳಕಂಡಂತೆ ದಂಡ ವಿಧಿಸಿ ಹಾಗೂ ಕರಾರನ್ನು ರದ್ದುಗೊಳಸಲು ಕ್ರಮ ಕೈಗೊಳ್ಳುವುದು.

| **ಮೊದಲ ಬಾರಿಗೆ** | **ಉಪಯೋಗಿಸಿದ ಹೆಚ್ಚುವರಿ ಸ್ಥಳಕ್ಕೆ ಮಾಸಿಕ ಪರವಾನಗಿ ಶುಲ್ಕದ 3 ಪಟ್ಟು ಪ್ರೋರೇಟಾ ದರಕ್ಕನುಗುಣವಾಗಿ ದಂಡ ವಿಧಿಸಲಾಗುವುದು.** | **ದಂಡವನ್ನು ಕನಿಷ್ಠ 1 ತಿಂಗಳು, ಗರಿಷ್ಠ ಉಪಯೋಗಿಸಿದ ಒಟ್ಟು ದಿನಗಳಿಗೆ ವಿಧಿಸಲಾಗುವುದು.** |
|---|---|---|
| ಎರಡನೇ ಬಾರಿಗೆ ಹಾಗೂ ಪುನರಾವರ್ತನೆಗೊಂಡಲ್ಲಿ | ಉಪಯೋಗಿಸಿದ ಹೆಚ್ಚುವರಿ ಸ್ಥಳಕ್ಕೆ ಮಾಸಿಕ ಪರವಾನಗಿ ಶುಲ್ಕದ 5 ಪಟ್ಟು ಪ್ರೋರೇಟಾ ದರಕ್ಕನುಗುಣವಾಗಿ ದಂಡ ವಿಧಿಸುವುದು. ಇದಲ್ಲದೇ ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಂಡು, ಕರಾರನ್ನು ರದ್ದುಪಡಿಸುವ ಅಧಿಕಾರವನ್ನು ಸಂಸ್ಥೆಯು ಹೊಂದಿರುತ್ತದೆ. | **ದಂಡವನ್ನು ಕನಿಷ್ಠ 1 ತಿಂಗಳು, ಗರಿಷ್ಠ ಉಪಯೋಗಿಸಿದ ಒಟ್ಟು ದಿನಗಳಿಗೆ ವಿಧಿಸಲಾಗುವುದು.** |

**XV) ಕರಾರು ರದ್ದತಿಯ ಷರತ್ತುಗಳು :**

1. ಯಾವುದೇ ಕಾರಣ ನೀಡದೆ, 4 ತಿಂಗಳ ನೋಟಿಸ್ ನೀಡಿ ಮಳಿಗೆಯ ಪರವಾನಿಗೆಯನ್ನು ರದ್ದುಪಡಿಸಲು ಸಂಸ್ಥೆಯು ಅಧಿಕಾರವನ್ನು ಹೊಂದಿರುತ್ತದೆ.
2. ಹೊಸದಾಗಿ ಆಯ್ಕೆಯಾಗುವ ಪರವಾನಗಿದಾರರು ಕನಿಷ್ಠ 2 ವರ್ಷ ಕಾಲ ಪರವಾನಿಗೆಯನ್ನು ನಡೆಸತಕ್ಕದ್ದು.
3. ಒಂದು ವೇಳೆ 2 ವರ್ಷ ಒಳಗಾಗಿ ಪರವಾನಿಗೆಯನ್ನು ರದ್ಧುಪಡಿಸಿಕೊಳ್ಳಲು ಇಚ್ಚಿಸಿದ್ದಲ್ಲಿ, 6 ತಿಂಗಳ ಮುಂಗಡ ನೋಟಿಸ್‌ನ್ನು ನೀಡಬೇಕು. ಮುಂಗಡ ನೋಟಿಸ್ ನೀಡುವ ಸಮಯದಲ್ಲಿ ಯಾವುದೇ ಹಿಂಬಾಕಿ ಇರಬಾರದು.
4. ನೋಟಿಸ್ ನೀಡಿದ 6 ತಿಂಗಳ ಅವಧಿಯಲ್ಲಿ ಮಳಿಗೆಯನ್ನು ನಡೆಸಲು ಇಚ್ಚಿಸಿದ್ದಲ್ಲಿ ಆಯಾ ತಿಂಗಳ ಪರವಾನಗಿ ಶುಲ್ಕ / ಜಿ.ಎಸ್.ಟಿಯನ್ನು ಮುಂಗಡವಾಗಿ ಪಾವತಿಸತಕ್ಕದ್ದು.
5. 2 ವರ್ಷ ಒಳಗಾಗಿ ಪರವಾನಿಗೆಯನ್ನು ರದ್ಧತಿ ಮಾಡಿಕೊಳ್ಳುವ ಪರವಾನಗಿದಾರರ **ಭದ್ರತಾ ಠೇವಣಿ ಮೊತ್ತವನ್ನು ಪೂರ್ಣವಾಗಿ ಮುಟ್ಟುಗೋಲು ಹಾಕಿಕೊಳ್ಳಲು** ಹಾಗೂ ಅವರ ಹೆಸರನ್ನು ಕಪ್ಪುಪಟ್ಟಿಗೆ ಸೇರಿಸಲು ಕ್ರಮ ಕೈಗೊಳ್ಳಲಾಗುವುದು.
6. 2 ವರ್ಷದ ನಂತರ ಪರವಾನಗಿಯನ್ನು ರದ್ದುಪಡಿಸಿಕೊಳ್ಳಲು ಪರವಾನಗಿದಾರರು ಇಚ್ಚಿಸಿದಲ್ಲಿ 4 ತಿಂಗಳ ಮುಂಗಡ ನೋಟಿಸ್ ಸಲ್ಲಿಸುವುದು. ಮುಗಡ ನೋಟಿಸ್ ನೀಡುವ ಸಮಯದಲ್ಲಿ ಯಾವುದೇ ಹಿಂಬಾಕಿ ಇರಬಾರದು.
7. ನೋಟಿಸ್ ನೀಡಿದ 4 ತಿಂಗಳ ಅವಧಿಯಲ್ಲಿ ಮಳಿಗೆಯನ್ನು ನಡೆಸಲು ಇಚ್ಚಿಸಿದ್ದಲ್ಲಿ ಆಯಾ ತಿಂಗಳ ಪರವಾನಗಿ ಶುಲ್ಕ / ಜಿ.ಎಸ್.ಟಿಯನ್ನು ಮುಂಗಡವಾಗಿ ಪಾವತಿಸತಕ್ಕದ್ದು.
8. ಮಾಸಿಕ ಪರವಾನಗಿ ಶುಲ್ಕ, ಸರಕು & ಸೇವಾ ತೆರಿಗೆ ಮತ್ತು ಇತರೆ ಶುಲ್ಕಗಳನ್ನು ಸತತವಾಗಿ 2 ತಿಂಗಳು ಪಾವತಿಸದೆ ಬಾಕಿ ಉಳಿಸಿಕೊಂಡಲ್ಲಿ ಅಂತಹ ಮಳಿಗೆಗಳ ಪರವಾನಗಿಯನ್ನು ಸಂಸ್ಥೆಯ ವತಿಯಿಂದ ರದ್ದುಪಡಿಸಿ, ಪರವಾನಗಿದಾರರು ಸಂಸ್ಥೆಯಲ್ಲಿಟ್ಟಿರುವ ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

**XVI) ಬಿಡ್‌ದಾರರು / ಪರವಾನಗಿದಾರರ ಹೆಸರನ್ನು ಕಪ್ಪು ಪಟ್ಟಿಗೆ ಸೇರಿಸುವ ಸಂದರ್ಭಗಳು :**

1. ಟೆಂಡರ್‌ನಲ್ಲಿ ಅರ್ಹಗೊಳ್ಳುವ ಸಲುವಾಗಿ ಬಿಡ್‌ದಾರರು / ಪರವಾನಗಿದಾರರು ಸಲ್ಲಿಸಿರುವ ದಾಖಲೆಗಳು ಯಾವುದೆ ಹಂತದಲ್ಲಿ ನೈಜತೆಯಿಂದ ಕೂಡಿಲ್ಲದಿರುವುದು ಕಂಡು ಬಂದಲ್ಲಿ ಅಂತಹ ಬಿಡ್‌ದಾರರ ಆಯ್ಕೆ / ಪರವಾನಗಿದಾರರ ಪರವಾನಗಿಯನ್ನು ರದ್ದುಪಡಿಸಿ, ಸಂಸ್ಥೆಯಲ್ಲಿಟ್ಟಿರುವ ಇ.ಎಂ.ಡಿ. / ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಅಂತಹ ಬಿಡ್‌ದಾರರನ್ನು / ಪರವಾನಗಿದಾರರನ್ನು ಮುಂದಿನ 2 ವರ್ಷಗಳ ಅವಧಿಗೆ ಕ.ಕ.ರ.ಸಾ., ನಿಗಮದ ವತಿಯಿಂದ ಆಹ್ವಾನಿಸಲಾಗುವ ಯಾವುದೇ ಟೆಂಡರ್‌ನಲ್ಲಿ ಭಾಗವಹಿಸದಂತೆ ಕಪ್ಪು ಪಟ್ಟಿಗೆ ಸೇರಿಸಲಾಗುವುದು.
2. ಬಿಡ್‌ದಾರರು ಬಿಡ್ ಹಿಂದಕ್ಕೆ ಪಡೆದಲ್ಲಿ ಅಥವಾ ತಿದ್ದುಪಡಿಗೊಳಸಿದಲ್ಲಿ ಅಥವಾ ಅಗೌರವ ತರುವಂತಹ ಸಂದರ್ಭಗಳಲ್ಲಿ, ಇ.ಎಂ.ಡಿ. ಮೊತ್ತ ಮುಟ್ಟುಗೋಲು ಹಾಕಿಕೊಂಡು ಮುಂದಿನ 2 ವರ್ಷಗಳ ಅವಧಿಗೆ ಕ.ಕ.ರ.ಸಾ., ನಿಗಮದ ವತಿಯಿಂದ ಅಹ್ವಾನಿಸಲಾಗುವ ಯಾವುದೇ ಟೆಂಡರ್‌ನಲ್ಲಿ ಭಾಗವಹಿಸದಂತೆ ಕಪ್ಪು ಪಟ್ಟಿಗೆ ಸೇರಿಸಲಾಗುವುದು.
3. ಒಂದು ವರ್ಷದ ಅವಧಿಯೊಳಗೆ ಯಾವುದೆ ಕಾರಣದಿಂದ ಪರವಾನಗಿ ರದ್ದುಗೊಳ್ಳುವಂತಹ ಮತ್ತು ಒಂದು ವರ್ಷದ ಅವಧಿಯೊಳಗೆ ಪರವಾನಗಿಯನ್ನು ರದ್ದುಪಡಿಸುವಂತೆ ಮನವಿ ಸಲ್ಲಿಸುವ ಪರವಾನಗಿದಾರರನ್ನು, ಮನವಿ ಸಲ್ಲಿಸಿದ ದಿನಾಂಕದಿಂದ ಮುಂದಿನ 2 ವರ್ಷಗಳ ಅವಧಿಗೆ ಕ.ಕ.ರ.ಸಾ., ನಿಗಮದ ವತಿಯಿಂದ ಅಹ್ವಾನಿಸಲಾಗುವ ಯಾವುದೆ ಟೆಂಡರ್‌ನಲ್ಲಿ ಭಾಗವಹಿಸದಂತೆ ಕಪ್ಪು ಪಟ್ಟಿಗೆ ಸೇರಿಸಲಾಗುವುದು.
4. ಪರವಾನಗಿ ಅವಧಿಯ ಯಾವುದೆ ಸಮಯದಲ್ಲಿ ಜಾಹೀರಾತು ಪ್ಯಾಕೇಜ್‌ನ್ನು ಉಪ-ಪರವಾನಗಿಗೆ ನೀಡಿರುವುದು ಕಂಡು ಬಂದಲ್ಲಿ/ ಸಾಬೀತಾಗಿದ್ದಲ್ಲಿ, ಪರವಾನಗಿಯನ್ನು ತಕ್ಷಣದಿಂದಲೇ ಜಾರಿಗೆ ಬರುವಂತೆ ರದ್ದುಪಡಿಸಿ, ಭದ್ರತಾ ಠೇವಣಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಹಾಗೆಯೇ ಕರಾರು ಒಪ್ಪಂದ ರದ್ದುಪಡಿಸಿದ ದಿನಾಂಕದಿಂದ ಮುಂದಿನ 2 ವರ್ಷಗಳ ಅವಧಿಗೆ ಕ.ಕ.ರ.ಸಾ., ನಿಗಮ ವತಿಯಿಂದ ಅಹ್ವಾನಿಸಲಾಗುವ ಯಾವುದೇ ಟೆಂಡರ್‌ನಲ್ಲಿ ಭಾಗವಹಿಸದಂತೆ ಸದರಿ ಪರವಾನಗಿದಾರರನ್ನು ಕಪ್ಪು ಪಟ್ಟಿಗೆ ಸೇರಿಸಲಾಗುವುದು.

6.......

5. ಕಪ್ಪು ಪಟ್ಟಿಗೆ ಸೇರಿದ ಪರವಾನಗಿದಾರರು ಸಂಸ್ಥೆಯ ಯಾವುದೇ ಟೆಂಡರ್/ಸಂಧಾನದಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ. ಒಂದು ವೇಳೆ ಟೆಂಡರ್/ಸಂಧಾನದಲ್ಲಿ ಭಾಗವಹಿಸಿದಲ್ಲಿ ಅವರ ಇ.ಎಂ.ಡಿ. ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

**XVII) ಹೋರ್ಡಿಂಗ್ಸ್ ಜಾಹೀರಾತು ಪ್ರದರ್ಶಿಸುವ ಸಂಬಂಧ ಸಾಮಾನ್ಯ ಷರತ್ತು ಮತ್ತು ನಿಬಂಧನೆಗಳು:**

1) ಜಾಹೀರಾತು ಪ್ಯಾಕೇಜ್‌ಗಳನ್ನು ಪ್ರದರ್ಶಿಸಲು ಪರವಾನಿಗೆದಾರರನ್ನು ಆಯ್ಕೆ ಮಾಡುವ ಹಾಗೂ ತಿರಸ್ಕರಿಸುವ ಹಕ್ಕನ್ನು ಸಂಸ್ಥೆಯು ಕಾಯ್ದಿರಿಸಿಕೊಂಡಿರುತ್ತದೆ.

2) ನ್ಯಾಯಾಲಯದಲ್ಲಿ ಸಂಸ್ಥೆಯ ವಿರುದ್ಧ ಪ್ರಕರಣ ದಾಖಲು ಮಾಡಿರುವವರು ಹಾಗೂ ಕಪ್ಪುಪಟ್ಟಿಯಲ್ಲಿ ಸೇರಿಸಲಾದ ಅಭ್ಯರ್ಥಿಗಳು ಟೆಂಡರ್‌ನಲ್ಲಿ ಭಾಗವಹಿಸುವಂತಿಲ್ಲ. ಒಂದು ವೇಳೆ ಇ-ಟೆಂಡರ್/ಮ್ಯಾನುವಲ್ ಸಂಧಾನದಲ್ಲಿ ಅಂತಹ ಅಭ್ಯರ್ಥಿಗಳು ಭಾಗವಹಿಸಿದ್ದಲ್ಲಿ ಅವರ ಬೇಡಿಕೆಯನ್ನು ತಿರಸ್ಕರಿಸುವ ಹಕ್ಕನ್ನು ಸಂಸ್ಥೆಯು ಕಾಯ್ದಿರಿಸಿಕೊಂಡಿದೆ.

3) ವಿಭಾಗದಿಂದ ಆಹ್ವಾನಿಸಲಾಗಿರುವ ಮ್ಯಾನುವಲ್ ಸಂಧಾನದಲ್ಲಿ ಗುರುತಿಸಿರುವ ಪ್ಯಾಕೇಜ್‌ಗಳಿಗೆ ಬಿಡ್‌ದಾರರು ಸಂಧಾನದ ಮೂಲಕ ಭಾಗವಹಿಸಿ ಆರ್ಥಿಕ ಬಿಡ್ಡನ್ನು ಘೋಷಿಸುವ ಬಿಡ್ ಮಾತ್ರ ಪರಿಗಣಿಸಲಾಗುವುದು. ಈ ಸಂಬಂಧ ಇನ್ನಾವುದೇ ಅನುಬಂಧಗಳು, ನಮೂನೆಗಳು ಮತ್ತು ಇತರೆ ಮಾಧ್ಯಮದ ಮೂಲಕ ಆರ್ಥಿಕ ಬಿಡ್ಡು ಕುರಿತು ಬೇಡಿಕೆದಾರರು ಸಲ್ಲಿಸುವ ದರಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ತಿಳಿಸಲಾಗಿದೆ.

4) ಆಯ್ಕೆಗೊಂಡ ಪರವಾನಿಗೆದಾರರು ಸಂಸ್ಥೆಯು ಸೂಚಿಸಿರುವ ಸ್ಥಳಗಳಲ್ಲಿ ಪ್ರದರ್ಶಿಸಿರುವ ಜಾಹೀರಾತು ಪ್ಯಾಕೇಜ್‌ಗಳಿಗೆ ಅಗ್ನಿ ಅವಘಡ ಅಥವಾ ಅಪರಿಚಿತರು ಹಾಳು ಮಾಡಿದ್ದಲ್ಲಿ ಅಥವಾ ಇತರೆ ನೈಸರ್ಗಿಕ ದುರಂತಗಳು ಸಂಭವಿಸಿದ್ದಲ್ಲಿ, ಅದಕ್ಕೆ ಸಂಸ್ಥೆಯು ಜವಾಬ್ದಾರಿಯಾಗಿರುವುದಿಲ್ಲ.

5) **ಪ್ರತಿ ಸ್ಥಳದಲ್ಲಿ ಹೋರ್ಡಿಂಗ್ಸ್ ಜಾಹೀರಾತಿನ ಶೇಕಡ 10% ರಷ್ಟು ಸ್ಥಳವನ್ನು ಸಂಸ್ಥೆಯ ಸ್ವಂತ ವಾಣಿಜ್ಯ ಉದ್ದೇಶಕ್ಕಾಗಿ ಉಚಿತವಾಗಿ ಕಾಯ್ದಿರಿಸತಕ್ಕದ್ದು**. ಪರವಾನಿಗೆದಾರರು ಪರವಾನಿಗೆ ಅವಧಿ ಮುಗಿದ ನಂತರ ಸಂಸ್ಥೆಯ ಕಟ್ಟಡ / ಆಸ್ತಿಗೆ ಹಾಗೂ ವಾಹನಗಳಿಗೆ ಯಾವುದೇ ಹಾನಿ/ಜಖಂ ಆಗದಂತೆ ಹೋರ್ಡಿಂಗ್ಸ್/ಜಾಹೀರಾತು ಫಲಕಗಳನ್ನು ತಮ್ಮ ಸ್ವಂತ ಖರ್ಚಿನಲ್ಲಿಯೇ ತೆಗೆದು ಹಾಕತಕ್ಕದ್ದು. ಒಂದು ವೇಳೆ ಪರವಾನಗಿದಾರರು ನಿಗಧಿತ ಸಮಯದಲ್ಲಿ ತೆರವುಗೊಳಿಸದಿದ್ದಲ್ಲಿ, ಸಂಸ್ಥೆಯ ವತಿಯಿಂದ ತೆರವುಗೊಳಿಸಲು ಕ್ರಮ ಕೈಗೊಂಡು, ಸದರಿ ಕಾರ್ಯಕ್ಕಾಗಿ ಆಗುವ ವೆಚ್ಚವನ್ನು ಪರವಾನಗಿದಾರರ ಭದ್ರತಾ ಠೇವಣಿಯಲ್ಲಿ ಮುರಿದುಕೊಳ್ಳಲುವುದು.

6) ಜಾಹೀರಾತುಗಳನ್ನು ಕನ್ನಡದಲ್ಲಿಯೂ ಪ್ರದರ್ಶಿಸುವುದು.

7) ಒಂದು ವೇಳೆ ಜಾಹೀರಾತುದಾರರು ಅಳವಡಿಸಲಾದ ಜಾಹೀರಾತು ಫಲಕಗಳು/ಹೋರ್ಡಿಂಗ್ಸ್ ಫಲಕಗಳ ವಿಫಲತೆ ಅಥವಾ ವಿದ್ಯುತ್ ಶಾರ್ಟ ಸರ್ಕ್ಯೂಟ್ ಅಥವಾ ಇಲ್ಯುಮಿನೇಶನಗಾಗಿ ಒದಗಿಸಿದ ವೈರಿಂಗನಿಂದಾಗಿ ಅಥವಾ ಜಾಹೀರಾತಿಗಾಗಿ ಒದಗಿಸಿದ ವಿದ್ಯುತ್ ಸೋರಿಕೆಯಿಂದ ಗಾಯಗಳು/ಸಾವು ಸಂಭವಿಸಿದಲ್ಲಿ ಅದಕ್ಕೆ ಜಾಹೀರಾತುದಾರರೇ ಜವಾಬ್ದಾರರಾಗಿದ್ದು, ಇದಕ್ಕಾಗಿ ತಗಲುವ ಹಾನಿ, ಜಖಂ, ವೈದ್ಯಕೀಯ ವೆಚ್ಚ, ಧನ ಪರಿಹಾರ ಹಾಗೂ ಕಾನೂನು ರೀತಿಯ ಯಾವುದೇ ವೆಚ್ಚವನ್ನು ಪರವಾನಿಗೆದಾರರೇ ಭರಿಸತಕ್ಕದ್ದು.

8) ಯಾವುದೇ ಕಾರಣದಿಂದ ಜಾಹೀರಾತು ಪ್ರದರ್ಶನದ ಒಪ್ಪಂದ ರದ್ದಾದಲ್ಲಿ ಜಾಹೀರಾತು ತೆಗೆದು ಹಾಕುವಿಕೆಗೆ/ಮಾಪಾರ್ಪಡಿಸುವಿಕೆ ಹಾಗೂ ಜಾಹೀರಾತುಗಳ ನಿಷೇಧದಿಂದಾಗುವ ಯಾವುದೇ ಜಖಂ/ಹಾನಿಗೆ ಸಂಸ್ಥೆಯು ಜವಾಬ್ದಾರವಾಗುವುದಿಲ್ಲ ಹಾಗೂ ಪರಿಹಾರ ನೀಡಲಾಗುವುದಿಲ್ಲ.

9) ಪರವಾನಗಿದಾರರು ಜಾಹೀರಾತುಗಳನ್ನು ಪ್ರದರ್ಶಿಸಲು ಅವಶ್ಯಕವಿರುವ ಕಾರ್ಯನಿರ್ವಹಣೆಯನ್ನು ಆಯಾ ಕ್ಷೇತ್ರದ ಏಜೆನ್ಸಿಗಳಿಂದ ಪಡೆಯಬಹುದಾಗಿರುತ್ತದೆ. ಆದರೆ, ಜಾಹೀರಾತು ಪ್ಯಾಕೇಜ್‌ನ್ನು ಉಪ ಪರವಾನಗಿ ನೀಡುವಂತಿಲ್ಲ. ಪರವಾನಗಿ ಪಡೆದ ಪರವಾನಗಿದಾರರೇ ಜಾಹೀರಾತು ಪ್ಯಾಕೇಜ್‌ಗಳನ್ನು ನಿರ್ವಹಿಸುವುದು.

10) ಮೀಸಲಾತಿ ಬಯಸುವ ಬಿಡ್‌ದಾರರು ಮೀಸಲಾತಿಗೆ ಸಂಬಂಧಿಸಿದ ದಾಖಲೆಗಳನ್ನು ಸಂಧಾನಕ್ಕೆ ಸಲ್ಲಿಸುವ ಅರ್ಜಿಯೊಂದಿಗೆ ಅಡಕಗೊಳಿಸಿ ಸಲ್ಲಿಸತಕ್ಕದ್ದು.

11) ಮುಷ್ಕರ್/ಬಂದ್ ಅವಧಿಯಲ್ಲಿ ಮಾಸಿಕ ಪರವಾನಗಿ ಶುಲ್ಕದಲ್ಲಿ ರಿಯಾಯಿತಿಗೆ ಅವಕಾಶವಿರುವುದಿಲ್ಲ.

12) ಸರ್ಕಾರಿ ಮತ್ತು ಅರೆ ಸರ್ಕಾರಿ ಸಂಸ್ಥೆಗಳಿಂದ ವಾಣಿಜೇತರ ಜಾಹೀರಾತುಗಳನ್ನು ಹೋರ್ಡಿಂಗ್ಸ್ ಮೂಲಕ (ಹೊರಾವಣ) ಅಳವಡಿಸುವ ಸಂಬಂಧ ಬೇಡಿಕೆ ಬಂದಲ್ಲಿ ಅದನ್ನು ಕೇಂದ್ರ ಕಚೇರಿಯ ಮುಖ್ಯಸ್ಥರಿಂದ ಅನುಮತಿ ಪಡೆದು ಕ್ರಮ ಕೈಗೊಳ್ಳುವ ಹಕ್ಕು ಸಂಸ್ಥೆಯು ಕಾಯ್ದಿರಿಸಿಕೊಂಡಿದ್ದು, ಇದಕ್ಕೆ ಆಯ್ಕೆಯಾಗಿರುವ ಪರವಾನಗಿದಾರರು ತಕರಾರು ಮಾಡುವತ್ತಿರುವುದಿಲ್ಲ ಮತ್ತು ಇದಕ್ಕೆ ಪರವಾನಗಿದಾರರು ಬದ್ಧರಾಗಿತಕ್ಕದ್ದು.

13) ವಾಣಿಜ್ಯೇತರ ಚಟುವಟಿಕೆ ಮತ್ತು ಸಾರ್ವಜನಿಕ ಹಿತಾಸಕ್ತಿ ಇರುವಂತಹ ಸರ್ಕಾರದ ಸಂಸ್ಥೆಗಳಿಗೆ, ಸಂಸ್ಥೆಯ ಬಸ್ ನಿಲ್ದಾಣಗಳಲ್ಲಿ ಸ್ಥಳಾವಕಾಶ ಲಭ್ಯವಿದ್ದ ಸಂದರ್ಭದಲ್ಲಿ, ಪ್ರತಿ ಬಸ್ ನಿಲ್ದಾಣದಲ್ಲಿ ಫಲಕಗಳನ್ನು (ಒಳಾವರಣ) ಅಳವಡಿಸಲು ಕೇಂದ್ರ ಕಚೇರಿಯ ಮುಖ್ಯಸ್ಥರಿಂದ ಅನುಮತಿ ಪಡೆದು ಕ್ರಮ ಕೈಗೊಳ್ಳುವ ಹಕ್ಕು ಸಂಸ್ಥೆಯು ಕಾಯ್ದಿರಿಸಿಕೊಂಡಿದ್ದು, ಇದಕ್ಕೆ ಆಯ್ಕೆಯಾಗಿರುವ ಪರವಾನಗಿದಾರರು ತಕರಾರು ಮಾಡುವತ್ತಿರುವುದಿಲ್ಲ ಮತ್ತು ಇದಕ್ಕೆ ಪರವಾನಗಿದಾರರು ಬದ್ಧರಾಗಿತಕ್ಕದ್ದು.

14) ಸಂಸ್ಥೆಯ ಸ್ಥಳಗಳಲ್ಲಿ ಜಾಹೀರಾತು ಪ್ರದರ್ಶಿಸುವ ಸಂಬಂಧ ಆಯ್ಕೆಯಾಗುವ ಪರವಾನಗಿದಾರರೇ ಸಂಬಂಧಿಸಿದ ಇಲಾಖೆ / ಪ್ರಾಧಿಕಾರರಿಂದ ಅನುಮತಿ ಪಡೆಯಬೇಕಾಗಿರುತ್ತದೆ. ಯಾವುದೇ ತಕರಾರು ಬಂದಲ್ಲಿ ಸದರಿ ಪರವಾನಗಿದಾರರೇ ಜವಾಬ್ದಾರಾಗಿರುತ್ತದೆ.

15) ಆಯ್ಕೆಯಾದ ಪರವಾನಿಗೆದಾರರು ಅವರ ಅನುಮೋದಿತ ಕಾರ್ಯಕ್ಕೆ ಅನ್ವಯವಾಗುವ ಸ್ಥಳೀಯ ಇಲಾಖೆ / ಪ್ರಾಧಿಕಾರಗಳು ವಿಧಿಸುವ ಜಾಹೀರಾತು ತೆರಿಗೆಯನ್ನು ಪರವಾನಿ**ಗೆದಾರರೇ ಸಂಬಂಧಿಸಿದ ಇಲಾಖೆ/ಪ್ರಾಧಿಕಾರಿಗಳಿಗೆ ಸಂದಾಯ ಮಾಡಬೇಕಾಗಿರುತ್ತದೆ**. ಹಾಗೂ ಇದಕ್ಕೆ ಸಂಬಂಧಿಸಿದ ದಾಖಲಾತಿಗಳನ್ನು ವಿಭಾಗೀಯ ನಿಯಂತ್ರಣಾಧಿಕಾರಿಗಳಿಗೆ ಕಾಲ-ಕಾಲಕ್ಕೆ ಸಲ್ಲಿಸತಕ್ಕದ್ದು. **ಒಂದು ವೇಳೆ ಈ ಸಂಬಂಧ ಕಾನೂನು ತೊಡಕುಗಳು ಉದ್ಭವವಾಗಿದ್ದಲ್ಲಿ ಅಥವಾ ನ್ಯೂನತೆಗಳು ಕಂಡುಬಂದಲ್ಲಿ ಪರವಾನಗಿದಾರರೆ ಜವಾಬ್ದಾರರಾಗಿರುತ್ತಾರೆ. ಹಾಗೆಯೇ ತೆರಿಗೆಯನ್ನು ಪಾವತಿಸುವ ಸಂಬಂಧ ಕರ್ನಾಟಕ ಸರ್ಕಾರ / ಭಾರತ ಸರಕಾರವು ಕಾಲಕಾಲಕ್ಕೆ ಹೊರಡಿಸುವ/ತಿದ್ದುಪಡಿ ಆದೇಶಕ್ಕೆ ಬದ್ಧರಾಗಿರತಕ್ಕದ್ದು.**

16) ಪರವಾನಗಿದಾರರು ಅಳವಡಿಸಲಾದ ಹೋರ್ಡಿಂಗ್ಸ್‌ಗಳ ಬೆಂಬಲಿತ ತಾತ್ಕಾಲಿಕ ಕಟ್ಟಡ ರಚನೆ/ಫ್ರೇಮ್ಸ್ ಮತ್ತು ತಾತ್ಕಾಲಿಕ ಕಟ್ಟಡ ಪರಿಶೀಲನೆ ನಡೆಸಿ, ನ್ಯೂನತೆ ಗುರುತಿಸಿ ಸರಿಪಡಿಸಲು ಸೂಚಿಸಿದ್ದಲ್ಲಿ, ಅದಕ್ಕಾಗಿ ಪರವಾನಗಿದಾರರು ಪರೀಕ್ಷೆಯನ್ನು ನಡೆಸಿ, ನ್ಯೂನತೆ ಹೌದಾದಲ್ಲಿ ಪರವಾನಗಿದಾರರು ಪರೀಕ್ಷಾ ಶುಲ್ಕ ಭರಿಸತಕ್ಕದ್ದು, ಇಲ್ಲವಾದಲ್ಲಿ ಪರಿಹಾರ ಅರ್ಹವಾದದ್ದು.

17) ಪರವಾನಿಗೆದಾರರು ಅಳವಡಿಸಲಾದ ಹೋರ್ಡಿಂಗ್ಸ್‌ಗಳ ತಾತ್ಕಾಲಿಕ ಕಟ್ಟಡದ ಸ್ಥಿರತೆಯ ಕುರಿತು ಪರಿಶೀಲನೆಗಾಗಿ ಸಂಬಂಧಿಸಿದ ಅಭಿಯಂತರರು ರವರಿಂದ ಪಡೆಯಲಾದ ಪ್ರಮಾಣ ಪತ್ರ ಹಾಜರುಪಡಿಸುವುದು. ಸಂಸ್ಥೆಯು ಏನಾದರೂ ನ್ಯೂನತೆ ಗುರುತಿಸಿ ತಿಳಿಸಿದಲ್ಲಿ ಅದನ್ನು 05 ದಿನಗಳ ಒಳಗಾಗಿ ಸರಿಪಡಿಸತಕ್ಕದ್ದು. ಹಾಗೆ ಮಾಡಲು ವಿಫಲರಾದಲ್ಲಿ ಅವುಗಳನ್ನು ಸಂಸ್ಥೆಯು ತೆಗೆದುಹಾಕಲಾಗುವುದು. ಅದಕ್ಕೆ ತಗಲುವ ವೆಚ್ಚವನ್ನು ಪರವಾನಿಗೆದಾರರೇ ಭರಿಸತಕ್ಕದ್ದು.

18) ಬಸ್ ನಿಲ್ದಾಣಗಳಲ್ಲಿ ಚಾಲ್ತಿಯಲ್ಲಿರುವ ಜಾಹೀರಾತು ಪ್ಯಾಕೇಜ್‌ಗಳ ಪರವಾನಿಗೆದಾರರು ಪರವಾನಿಗೆ ಅವಧಿಯಲ್ಲಿ ಆಕಸ್ಮಿತ ಮೃತಪಟ್ಟಲ್ಲಿ ಅವರ ಅವಲಂಭಿತರಿಗೆ (ಹೆಂಡತಿ / ಗಂಡ / ಮಗಳು / ಮಗ / ಸೊಸೆ / ಅವಲಂಭಿತ / ವಿಧವೆಯ ಮಗಳು) ಪರವಾನಿಗೆ ಉಳಿಕೆ ಅವಧಿಯವರೆಗೆ ನೀತಿ ನಿಬಂಧನೆಗೊಳಪಟ್ಟು ಮುಂದುವರೆಸಿಕೊಂಡು ಹೋಗಲು ಕೇಂದ್ರ ಕಚೇರಿ ವಾಣಿಜ್ಯ ಇಲಾಖೆಯ ಮುಖ್ಯಸ್ಥರ ಅನುಮೊದನೆ ಪಡೆಯಬೇಕಾಗಿರುತ್ತದೆ.

19) ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಕಾಮಗಾರಿ ಉಪವಿಭಾಗ ರವರು ಅಳವಡಿಸಲಾದ ಹೋರ್ಡಿಂಗ್ಸ್‌ಗಳ ಬೆಂಬಲಿತ ತಾತ್ಕಾಲಿಕ ಕಟ್ಟಡ ರಚನೆ/ಫ್ರೇಮ್ಸ್ ಮತ್ತು ತಾತ್ಕಾಲಿಕ ಕಟ್ಟಡವನ್ನು ಪರಿಶೀಲಿಸಿ ಯಾವುದೇ ನ್ಯೂನತೆಗಳಿದ್ದರೆ, ಅವುಗಳನ್ನು ಗುರುತಿಸಿ ತಿಳಿಸಲಾಗುತ್ತದೆ. ಹಾಗೆ ತಿಳಿಸಲಾದ ನ್ಯೂನತೆಗಳನ್ನು ನಿಗದಿತ ಕಾಲಮಿತಿಯೊಳಗೆ ಸರಿಪಡಿಸತಕ್ಕದ್ದು.

20) ಪರವಾನಗಿದಾರರು ಹೋರ್ಡಿಂಗ್ಸ್ / ಗ್ಲೋಸೈನ್ ಬೋರ್ಡ್ ಇತ್ಯಾದಿಗಳನ್ನು ಅಳವಡಿಸುವಾಗ ಹಾಗೂ ತೆರವುಗೊಳಿಸುವಾಗ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಮೇಲ್ವಿಚಾರಣೆಯಲ್ಲಿ ನಡೆಸುವುದು. ಈ ಸಮಯದಲ್ಲಿ ಸಂಸ್ಥೆಯ ಆಸ್ತಿ-ಪಾಸ್ತಿಗೆ ಹಾನಿಯಾಗಿರುವ/ ಸುರಕ್ಷತವಾಗಿರುವ ಬಗ್ಗೆ ಕಾಮಗಾರಿ ಶಾಖೆಯಿಂದ ದೃಢೀಕರಣವನ್ನು ಪಡೆಯುವುದು. ಒಂದು ವೇಳೆ ಸಂಸ್ಥೆಯ ಆಸ್ತಿ-ಪಾಸ್ತಿಗೆ ಹಾನಿ/ಧಕ್ಕೆಯಾದಲ್ಲಿ, ಸದರಿ ಮೊತ್ತವನ್ನು ಪರವಾನಗಿದಾರರಿಂದ ವಸೂಲಿ ಮಾಡಿಕೊಳ್ಳಲಾಗುವುದು.

21) ಸಂಸ್ಥೆಯ ನಿಯಮಗಳಂತೆ ಆಯ್ಕೆಗೊಂಡು ಜಾಹೀರಾತು ಪ್ರದರ್ಶಿಸಲು ಪರವಾನಗಿ ಪಡೆದ ನಂತರ ಸದರಿ ಪರವಾನಗಿ ಅವಧಿಯು ಮುಕ್ತಾಯವಾಗುವ 4-5 ತಿಂಗಳ ಮುಂಚಿತವಾಗಿ ಪುನಃ ಟೆಂಡರ್ ಆಹ್ವಾನಿಸಲು ಕ್ರಮ ಕೈಕೊಳ್ಳಲಾಗುವುದು.

22) ಕರಾರು ಒಪ್ಪಂದಕ್ಕೆ ಸಂಬಂಧಿಸಿದಂತೆ ಪರವಾನಿಗೆದಾರ ಅಥವಾ ಪರವಾನಿಗೆದಾರರ ಪ್ರತಿನಿಧಿಯಿಂದ ಯಾವುದೇ ಕಾನೂನು, ಸಂಸ್ಥೆಯ ಕರಾರು & ನಿಬಂಧನೆಗಳ ಉಲ್ಲಂಘನೆಯಿಂದ ಉದ್ಭವಿಸುವ ಘಟನೆಗಳಿಗೆ ಪರವಾನಿಗೆದಾರರೇ ಜವಾಬ್ದಾರರು.

23) ಪರವಾನಗಿದಾರರು ಹೋರ್ಡಿಂಗ್ಸ್/ಗ್ಲೋಸೈನ್ ಬೋರ್ಡ ಇತ್ಯಾದಿಗಳ ನಿರ್ಮಾಣ / ನಿರ್ವಹಣೆಯ ಸಂಬಂರ್ಧದಲ್ಲಿ ಕಾರ್ಯನಿಮಿತ್ಯ ಸಿಬ್ಬಂದಿಗಳಿಗೆ /ಸಾರ್ವಜನಿಕ ಪ್ರಯಾಣಿಕರಿಗೆ ಹಾಗೂ ಸಂಸ್ಥೆಯ ಆಸ್ತಿ-ಪಾಸ್ತಿಗಳಿಗೆ ಧಕ್ಕೆಯುಂಟಾದಲ್ಲಿ ಪ್ರಸ್ತುತ ಜಾರಿಯಲ್ಲಿರುವ ಮತ್ತು ಸರ್ಕಾರ ಜಾರಿಗೊಳಿಸಬಹುದಾದ ಎಲ್ಲಾ ಕಾನೂನು ನಿಯಮಗಳಡಿ ಪರವಾನಗಿದಾರರೇ ಹೊಣೆಗಾರರಾಗಿರುತ್ತಾರೆ.

24) ಪರವಾನಿಗೆದಾರರು ಕೆಲಸಗಾರರಿಗೆ ಕನಿಷ್ಠ ಕಾಯ್ದೆ ಅನ್ವಯ ಕನಿಷ್ಠ ವೇತನ, ಭವಿಷ್ಯ ನಿಧಿ ಇತ್ಯಾದಿ ಶಾಸನ ಬದ್ಧ ಸೌಲಭ್ಯ ನೀಡಬೇಕು. ಈ ಕೆಲಸಗಾರರಿಗೆ ಹಾಗೂ ಸಂಸ್ಥೆಗೆ ಯಾವುದೇ ರೀತಿಯ ಸಂಬಂಧವಿರುವುದಿಲ್ಲ. ಪರವಾನಿಗೆದಾರರು ಕೆಲಸಗಾರರಿಗೆ ಚಾಲ್ತಿಯಲ್ಲಿರುವ ಶಾಸನಬದ್ಧವಾದ ಕಾಂಟ್ರ್ಯಾಕ್ಟ ಲೇಬರ (ರೆಗುಲೇಶನ್ & ಎಬೋಲಿಶನ್), ಕನಿಷ್ಠ ಕಾಯ್ದೆ ಅನ್ವಯ ಕನಿಷ್ಠ ವೇತನ, ಫ್ಯಾಕ್ಟರಿ ಕಾಯ್ದೆ, ಕಾರ್ಮಿಕರ ಭವಿಷ್ಯ ಕಾಯ್ದೆ, ಬೋನಸ್ ಕಾಯ್ದೆ, ಗ್ರ್ಯಾಚ್ಯೂಟಿ ಕಾಯ್ದೆ, ಏಕರೂಪ ರೆಮುನರೇಶನ್ ಕಾಯ್ದೆ, ಇಎಸ್‌ಐ ಕಾಯ್ದೆ, ಕೈಗಾರಿಕಾ ವಿವಾದಗಳ ಕಾಯ್ದೆ, ಬಾಲ ಕಾರ್ಮಿಕರ ನೇಮಕ ನಿಷೇಧ ಕಾಯ್ದೆ, ಮೋಟಾರು ಕಾಯ್ದೆ ಮತ್ತು ಉದ್ಯೋಗ ಹಾಗೂ ಅದರ ನಿಯಮಾವಳಿ ಕಾಯ್ದೆಯನ್ವಯ ಕಾರ್ಮಿಕ ಸೌಲಭ್ಯ ನೀಡತಕ್ಕದ್ದು. ಈ ಸಂಬಂಧ ಪರವನಗಿದಾರರು ಕ್ರಮ ಕೈಗೊಳ್ಳಲು ವಿಫಲರಾಗಿದ್ದಲ್ಲಿ, ಅಥವಾ ಸರ್ಕಾರದಿಂದ ಸಂಬಂಧಪಟ್ಟ ಕಾರ್ಮಿಕ ಅಧಿಕಾರಿಗಳು ಪರಿಶೀಲಿಸಿ ವರದಿಯನ್ನು ಸಲ್ಲಿಸಿದ್ದಲ್ಲಿ ಅದಕ್ಕೆ ಸಂಪೂರ್ಣವಾಗಿ ಆಯ್ಕೆಯಾಗಿರುವ ಪರವಾನಗಿದಾರರಿಗೆ ಜವಾಬ್ದಾರರಾಗಿರುತ್ತಾರೆ.

25) ಜಾಹೀರಾತುದಾರರಾಗಲೀ ಅಥವಾ ಜಾಹೀರಾತು ಪರವಾನಿಗೆದಾರರ ಪ್ರತಿನಿಧಿಯಿಂದವದಾಗಲೀ ಸಂಸ್ಥೆಯ ಆಸ್ತಿಗೆ/ಕಟ್ಟಡಗಳಿಗೆ ಹಾನಿ/ಜಖಂ ಉಂಟಾದಲ್ಲಿ, ಸದರಿ ವೆಚ್ಚವನ್ನು ಜಾಹೀರಾತುದಾರರೇ ಭರಿಸತಕ್ಕದ್ದು.

26) ಆಯ್ಕೆಗೊಂಡ ಪರವಾನಗಿದಾರರು ಏಲೇಕ್ಟ್ರಿಕಲ್ ಅಳವಡಿಕೆ/ಬೆಳಕಿನ ಅಳವಡಿಕೆ/ವೈರಿಂಗ್ ಇತ್ಯಾದಿ (ವಿದ್ಯುತ್ ಸಂಪರ್ಕ/ವಿದ್ಯುತ್ ಬೆಳಕು/ವಿದ್ಯುತ್ ವೈರಿಂಗ್) ಅಳವಡಿಕೆಗಳ ಸುರಕ್ಷತಾ ಕ್ರಮಗಳ ಕುರಿತು ಸಂಬಂಧಪಟ್ಟ ಪ್ರಾಧಿಕಾರಿಗಳಿಂದ ಪಡೆದ ದೃಢೀಕರಣ ಪತ್ರದ ಪ್ರತಿಯನ್ನು ಸಲ್ಲಿಸುವುದು. ವಿದ್ಯುತ್ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳುವುದು ಪರವಾನಗಿದಾರರ ಜವಾಬ್ದಾರಿಯಾಗಿರುತ್ತದೆ.

27) ಪ್ರದರ್ಶಿಸಲಿಚ್ಛಿಸುವ ಜಾಹೀರಾತುಗಳು ಒಳ್ಳೆಯ ಶ್ರೇಷ್ಠಗುಣಮಟ್ಟ, ಸಂಸ್ಥೆಯ ಆಶೋತ್ತರಗಳ ಬೆಳವಣಿಗೆಗೆ ಸಹಕಾರಿಯಾಗಿರತಕ್ಕದ್ದು ಹಾಗೂ ಸಂಸ್ಥೆಯ ಅನುಮೋದನೆಯಂತಿರಬೇಕು.

28) ಜಾಹೀರಾತುದಾರರು ಒಳ್ಳೆಯ ನಡತೆ ಹಾಗೂ ಕೌಶಲ್ಯವುಳ್ಳ ಅನುಭವಿ ಕೆಲಸಗಾರರನ್ನು ನಿಯೋಜಿಸುವುದು.

29) ಪರವಾನಿಗೆದಾರರು ಸಂಸ್ಥೆಯ ಆವರಣದಲ್ಲಿ ಗಾಯಗಳಾದಂತಹ ಅಥವಾ ಹಾನಿ ಉಂಟು ಮಾಡುವಂತಹ ಭಾರವುಳ್ಳ ವಸ್ತುಗಳನ್ನು ಸಂಗ್ರಹಿಸುವುದಾಗಲೀ ಅಥವಾ ತರುವುದಾಗಲೀ ಅಥವಾ ಇಡುವುದಾಗಲೀ ಮತ್ತು ಉರಿಯುವ ಇಂಧನ ವನ್ನು ಶೇಖರಿಸಿಡತಕ್ಕದ್ದಲ್ಲ.

30) ಆಯ್ಕೆಗೊಂಡ ಪರವಾನಗಿದಾರರು ಅಳವಡಿಸಲು ಪ್ರಸ್ತಾಪಿಸುವ ಹೋರ್ಡಿಂಗ್‌ಗಳಿಗೆ ಬೆಂಬಲವಾಗಿ ನಿಲ್ಲಿಸುವ ವಿನಾಸಗಳಿಗೆ (Structure) ನೊಂದಾಯಿತ ವಿನ್ಯಾಸ ಅಭಿಯಂತರರು/ಸಂಬಂಧಿಸಿದ ಪ್ರಾಧಿಕಾರಿಗಳಿಗೆ ದೃಢೀಕರಣವನ್ನು ಪಡೆದ ಪ್ರತಿಯನ್ನು ವಿಭಾಗೀಯ ನಿಯಂತ್ರಣಾಧಿಕಾರಿಗಳಿಗೆ ಪರಿಶೀಲನೆಗಾಗಿ ಸಲ್ಲಿಸುವುದು. ಒಂದು ವೇಳೆ ರಚನೆ/ವಿನ್ಯಾಸ/ಯೋಜನೆಯಲ್ಲಿ ನ್ಯೂನ್ಯತೆ ಇದ್ದಲ್ಲಿ 5 ದಿನಗಳೊಳಗೆ ಸರಿಪಡಿಸುವುದು. ಇಲ್ಲದಿದ್ದಲ್ಲಿ ಸಂಸ್ಥೆಯು ನ್ಯೂನ್ಯತಾಯ ಕೆಲಸವನ್ನು ಅಥವಾ ಭಾಗವನ್ನು ತೆರವುಗೊಳಿಸಲು ಅಥವಾ ಸಂಬಂಧಿಸಿದ ಏಜೆನ್ಸಿಯಿಂದ ವೆಚ್ಚವನ್ನು ಮರುಪಾವತಿಸಿಕೊಳ್ಳಲು ಕ್ರಮ ಕೈಗೊಳ್ಳಲಾಗುವುದು.

31) ಸಂಸ್ಥೆಯ ನಿಲ್ದಾಣಗಳಲ್ಲಿ, ಘಟಕಗಳಲ್ಲಿ ಅಥವಾ ಇನ್ನ್ಯಾವುದೇ ಸ್ಥಳಗಳಲ್ಲಿ ಗೋಡೆ ಬರಹಗಳಿಗೆ ಅವಕಾಶವಿರುವುದಿಲ್ಲ.

32) ಬಸ್ ನಿಲ್ದಾಣಗಳ ನವೀಕರಣ ಕಾಮಗಾರಿ / ಆವರಣವನ್ನು ಮೇಲ್ದರ್ಜೆಗೇರಿಸುವ / ದುರಸ್ತಿ ಕಾರ್ಯಗಳನ್ನು ಕೈಗೆತ್ತಿಕೊಳ್ಳುವ ಸಮಯದಲ್ಲಿ, ಸಂಸ್ಥೆಯು ಪರವಾನಗಿದಾರರಿಗೆ ಒಂದು ತಿಂಗಳ ಮುಂಗಡ ನೋಟಿಸ್ ಜಾರಿ ಮಾಡಿ, ಎಲ್ಲಾ ಜಾಹೀರಾತುಗಳನ್ನು ತೆರವುಗೊಳಿಸಲು ಸೂಚಿಸುವುದರೊಂದಿಗೆ ಪರವಾನಗಿಯನ್ನು ರದ್ದುಪಡಿಸುವ ಅಧಿಕಾರವನ್ನು ಸಂಸ್ಥೆಯು ಕಾಯ್ದಿರಿಸಿಕೊಂಡಿದ್ದು, ಇದಕ್ಕೆ ಪರವಾನಗಿದಾರರು ಬದ್ಧರಾಗಿರತಕ್ಕದ್ದು.

33) ನವೀಕರಣ ಕಾಮಗಾರಿ ಪೂರ್ಣಗೊಂಡ ನಂತರ ಮಳಿಗೆಗಳ ವಿಸ್ತೀರ್ಣದಲ್ಲಿ ಬದಲಾವಣೆಗಳಾದಲ್ಲಿ, ವಿಸ್ತೀರ್ಣಕ್ಕೆ ಅನುಗುಣವಾಗಿ ಮಾಸಿಕ ಪರವಾನಗಿ ಶುಲ್ಕವನ್ನು ಮರು ನಿಗದಿಪಡಿಸುವುದು.

34) ಬಿಡ್‌ದಾರರು ಷರತ್ತಿನ ಟೆಂಡರಗಳನ್ನು ಪರಿಗಣಿಸಲು ಅವಕಾಶವಿರುವುದಿಲ್ಲ. ಯಾವುದೇ ಷರತ್ತುಗಳು ಇಲ್ಲದೆ ಟೆಂಡರ್ ನಿಯಮಗಳನ್ನು ಪಾಲಿಸುವ ಅರ್ಹ ಟೆಂಡರಗಳನ್ನು ಮಾತ್ರ ಅಂಗೀಕರಿಸಲಾವುದು.

35) ಆಯ್ಕೆಗೊಂಡ ಪರವಾನಿಗೆದಾರರು ಕಾರ್ಮಿಕರ ಭವಿಷ್ಯನಿಧಿ ಸಂಘಟನೆ (Employees Provident Fund Organisation) ರವರಲ್ಲಿ ನೋಂದಣಿ ಮಾಡಿಸಿಕೊಂಡಿರಬೇಕು, ಸಂಸ್ಥೆಯ ಜಾಹೀರಾತು ಪ್ಯಾಕೇಜ್ ಸಲುವಾಗಿ ಬಳಸಿಕೊಳ್ಳುವ ನೌಕರರು/ಸಿಬ್ಬಂದಿಗಳಿಗೆ ಪ್ರತಿ ತಿಂಗಳ ಮಾಸಿಕ ಭವಿಷ್ಯ ನಿಧಿ ವಂತಿಕೆಯನ್ನು ಆರ್.ಪಿ.ಎಫ್.ಸಿ ರವರಿಗೆ ಜಮಾ ಮಾಡಬೇಕಾಗಿರುತ್ತದೆ, **ಈ ಕುರಿತು ಪರವಾನಗಿದಾರರು ಸ್ವಯಂ ಘೋಷಣಾ ಪತ್ರವನ್ನು ಸಲ್ಲಿಸುವುದು.**

೩೬) ಪರವಾನಿಗೆದಾರರು ತಮ್ಮ ವ್ಯವಹಾರಕ್ಕೆ ಸಂಬಂಧಿಸಿದ ಜಿ.ಎಸ್.ಟಿ., ಆದಾಯ ತೆರಿಗೆ, ಭವಿಶ್ಯನಿಧಿ, ಇ.ಎಸ್.ಐ, ಸೇಲ್ಸ್ ಟ್ಯಾಕ್ಸ್ ಕ್ಲೀಯರನ್ಸ್ ಪ್ರಮಾಣ ಪತ್ರ, ಟ್ರೇಡ್ ಲೈಸನ್ಸ್, ಲೇಬರ್ ಲೈಸನ್ಸ್, ಫುಡ್ ಲೈಸನ್ಸ್ ಇತ್ಯಾದಿ ಪ್ರಮಾಣ ಪತ್ರಗಳನ್ನು ಹೊಂದಿರಬೇಕು.

೩೭) ಆಯ್ಕೆಗೊಂಡ ಪರವಾನಿಗೆದಾರರು ಸಂಸ್ಥೆಯ ಜಾಹೀರಾತು ಪ್ಯಾಕೇಜ್ ಸಲುವಾಗಿ ಬಳಸಿಕೊಳ್ಳುವ ನೌಕರರಿಗೆ/ಸಿಬ್ಬಂದಿಗಳಿಗೆ ಕಾರ್ಮಿಕ ಇಲಾಖೆಯ ನಿಯಮಾವಳಿಗಳನ್ವಯ ಪಿಎಫ್/ಇಎಸ್ಐ ಸೌಲಭ್ಯ ವಿಸ್ತರಿಸಿರುವ ಬಗ್ಗೆ ಅಗತ್ಯ ದಾಖಲಾತಿ ಒದಗಿಸುವುದು, ಸಂಬಂಧಿಸದಿದ್ದಲ್ಲಿ, ಸ್ವಯಂ ಘೋಷಣಾ ಪತ್ರವನ್ನು ಸಲ್ಲಿಸುವುದು.

೩೮) ಯಾವುದೇ ಸಮಯದಲ್ಲಿ ಹೆಚ್ಚಿನ ಷರತ್ತು ಮತ್ತು ನಿಬಂಧನೆಗಳನ್ನು ಕರಾರಿನಲ್ಲಿ ಸೇರಿಸಲು ಮತ್ತು ಮಾರ್ಪಡಿಸಲು ಸಂಸ್ಥೆಯು ಅಧಿಕಾರ ಹೊಂದಿರುತ್ತದೆ.

೩೯) **ಕ್ರಮ ಸಂ: ೦೨ ರಲ್ಲಿರುವ ಬಳ್ಳಾರಿ ನಗರ ಬಸ್ ನಿಲ್ದಾಣದ ಒಳ ಆವರಣದ ಜಾಹೀರಾತು ಪ್ರದರ್ಶನಕ್ಕಾಗಿ ಮ್ಯಾನುವಲ್ ಸಂಧಾನದ ಟೆಂಡರ್‌ನಲ್ಲಿ ಭಾಗವಹಿಸುವ ಬೇಡಿಕೆದಾರರು ನಿಲ್ದಾಣದ ಪ್ಲಾಟ್‌ಫಾರಂ ಬೋರ್ಡಗಳಲ್ಲಿ ("F" ರಲ್ಲಿ ತೋರಿಸಿರುವ ಬೋರ್ಡಗಳು) ಶೇಕಡ ೨೫% ರಷ್ಟು ಮಾತ್ರ ಜಾಹೀರಾತು ಪ್ರದರ್ಶಿಸಲು ಅವಕಾಶವಿರುತ್ತದೆ. ಇನ್ನುಳಿದ ಶೇಕಡ ೭೫% ಭಾಗದ ಸ್ಥಳದಲ್ಲಿ ನಿಲ್ದಾಣದಿಂದ ಇತರೆ ಸ್ಥಳಗಳಿಗೆ ನಿರ್ಗಮಿಸುವ ಬಸ್‌ಗಳ ವಿವರ ಅಥವಾ ಸಂಸ್ಥೆಯು ಸೂಚಿಸುವ ಮಾಹಿತಿಯನ್ನು ಪ್ರದರ್ಶಿಸುವುದು ಕಡ್ಡಾಯವಾಗಿರುತ್ತದೆ.**

೪೦) **ಹೋರ್ಡಿಂಗ್ಸ್, ಗ್ಲೋಸೈನ ಜಾಹೀರಾತು ಫಲಕಗಳ ಸ್ಥಳವನ್ನು ಕರಾರು ಒಪ್ಪಂದದ ನಿಗಧಿತ ಅವಧಿಯಲ್ಲಿ ಮಾರ್ಪಡಿಸುವ /ತಿದ್ದುಪಡಿ ಮಾಡುವ ಹಕ್ಕನ್ನು ಸಂಸ್ಥೆಯು ಕಾಯ್ದಿರಿಸಿಕೊಂಡಿದೆ.**

೪೧) ಯಾವುದೇ ಕಾರಣ ನೀಡದೆ ಟೆಂಡರನ್ನು ಪುರಸ್ಕರಿಸುವ / ತಿರಸ್ಕರಿಸುವ ಅಧಿಕಾರವನ್ನು ಸಂಸ್ಥೆಯು ಹೊಂದಿರುತ್ತದೆ.

೪೨) ಸಂಸ್ಥೆಯ ವ್ಯವಹಾರಕ್ಕೆ ವ್ಯತಿರಿಕ್ತ ಪರಿಣಾಮ ಉಂಟು ಮಾಡುವ ಜಾಹೀರಾತನ್ನು ಪ್ರದರ್ಶಿಸಲು ಸಂಸ್ಥೆಯ ವತಿಯಿಂದ ನಿಷೇದಿಸಲಾಗಿದೆ. ಹಾಗೆಯೇ ಮುಂದೆಯೂ ಸಹ ಸಂಸ್ಥೆಯಿಂದ ನಿಷೇದಿಸಲ್ಪಡುವ ವಸ್ತು ಹಾಗೂ ಕಾನೂನು ಬಾಹೀರ ವಸ್ತುಗಳ ಜಾಹೀರಾತು ಪ್ರದರ್ಶನಗಳನ್ನು ಕಡ್ಡಾಯವಾಗಿ ಮಾಡುವಂತಿಲ್ಲ. ಈ ರೀತಿ ವಸ್ತುಗಳ ಜಾಹೀರಾತು ಪ್ರದರ್ಶನ ಮಾಡಿರುವುದು ಕಂಡುಬಂದಲ್ಲಿ ಪರವಾನಗಿದಾರರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

೪೩) ಆಯ್ಕೆಯಾದ ಜಾಹೀರಾತು ಪರವಾನಿಗೆದಾರರರಿಗೆ ಕಾನೂನು ಅಡಿಯಲ್ಲಿ ಬರತಕ್ಕಂತಹ ಜಾಹೀರಾತುಗಳನ್ನು ಮಾತ್ರ ಪದರ್ಶಿಸಲು ಅನುಮತಿಸಲಾಗುವುದು. ಜಾಹೀರಾತುದಾರರು ಅಶ್ಲೀಲ ಜಾಹೀರಾತು ಪ್ರದರ್ಶನ, ಸಾರ್ವಜನಿಕ ಹಿತಾಸಕ್ತಿಗೆ ವಿರುದ್ಧವಾದ, ಅನೈತಿಕ ಗುಣವುಳ್ಳ, ವಿರೂಪ ಜಾಹೀರಾತು ಪೋಷ್ಟರ / ಮೂರ್ತಿಗಳನ್ನು ಪ್ರದರ್ಶಿಸತಕ್ಕದ್ದಲ್ಲ. ಈ ವಿಷಯದಲ್ಲಿ ಸಂಸ್ಥೆಯ ನಿರ್ಧಾರವೇ ಅಂತಿಮವಾಗಿದ್ದು, ಅದಕ್ಕೆ ಜಾಹೀರಾತುದಾರರು ಬದ್ಧರಾಗಿರತಕ್ಕದ್ದು.

೪೪) ಹೋರ್ಡಿಂಗ್ಸ್‌ಗಳನ್ನು ತಾಂತ್ರಿಕವಾಗಿ ಸ್ಟೀಲ್ / ಸ್ಟ್ರಕ್ಚರ್ಸ / ಟ್ಯೂಬುಲರ ಸ್ಟ್ರಕ್ಚರ್ಸ ಎಂಗಲ್‌ಗಳಿಂದ ಸೂಕ್ತ ಬುನಾದಿಯೊಂದಿಗೆ ಅಳವಡಿಸುವುದು. ಯಾವುದೇ ಕಾರಣಕ್ಕೂ ಪರವಾನಿಗೆದಾರರು ಸಿಮೆಂಟನಿಂದ ಮಾಡಲಾದ ಶಾಶ್ವತ ಕಾಂಕ್ರೀಟನಿಂದ ಅಳವಡಿಸತಕ್ಕದ್ದಲ್ಲ.

೪೫) ಜಾಹೀರಾತುದಾರರು ಜಾಹೀರಾತುಗಳನ್ನು ಕನ್ನಡ ಭಾಷೆಯಲ್ಲಿಯೂ ಪ್ರದರ್ಶಿಸಬಹುದಾಗಿದೆ.

೪೬) ಜಾಹೀರಾತುದಾರರು ಜಾಹೀರಾತಿಗೆ ಸಂಬಂಧಿಸಿದಂತೆ ಎಲ್ಲಾ ತೆರಿಗೆ, ಸೆಸ್, ದಂಡ, ಮತ್ತು ಕಾನೂನು ಪ್ರಕಾರ ಪಾವತಿಸಬೇಕಾದ ಎಲ್ಲಾ ಕರಗಳನ್ನು ಸಂಬಂಧಿಸಿದ ಇಲಾಖೆಗೆ ಸಂದಾಯಿಸಿದ ನಂತರವೇ ಜಾಹೀರಾತು ಪ್ರದರ್ಶನಕ್ಕೆ ಅನುಮತಿಸಲಾಗುವುದು.

೪೭) ಸಂಸ್ಥೆಯು ೧೫ ದಿನಗಳ ಮುಂಗಡ ನೋಟಿಸ್ ನೀಡಿ ಕರಾರು ಒಪ್ಪಂದ ರದ್ದುಪಡಿಸುವ ಹಕ್ಕ‌ನ್ನು ಸಂಸ್ಥೆಯು ಹೊಂದಿರುತ್ತದೆ. ಈ ವಿಷಯದಲ್ಲಿ ಸಂಸ್ಥೆಯ ನಿರ್ಣಯವೇ ಅಂತಿಮವಾಗಿರುತ್ತದೆ.

೪೮) ಟೆಂಡರದಾರರು ರಾಜ್ಯ ಅಥವಾ ಕೇಂದ್ರ ಸರಕಾರ ಅಥವಾ ಸರಕಾರಿ ಸ್ವಾಮ್ಯದ ಸಂಸ್ಥೆಗಳಿಂದ ಹೆಸರನ್ನು ಕಪ್ಪು ಪಟ್ಟಿಯಲ್ಲಿ ಸೇರ್ಪಡೆಯಾಗಿದ್ದಲ್ಲಿ ಅಂತಹವರು ಟೆಂಡರಿನಲ್ಲಿ ಭಾಗವಹಿಸಲು ಅರ್ಹರಾಗುವುದಿಲ್ಲ. ಟೆಂಡರದಾರರು ರಾಜ್ಯ ಅಥವಾ ಕೇಂದ್ರ ಸರಕಾರ ಅಥವಾ ಸರಕಾರಿ ಸ್ವಾಮ್ಯದ ಸಂಸ್ಥೆಗಳಿಂದ ಹೆಸರನ್ನು ಕಪ್ಪು ಪಟ್ಟಿಯಲ್ಲಿ ಸೇರ್ಪಡೆಗೊಂಡಿರುವುದಿಲ್ಲ ಎಂಬುವುದಕ್ಕೆ ಸ್ವಘೋಷಿತ ಪ್ರಮಾಣ ಪತ್ರವನ್ನು ಸಂಧಾನದಲ್ಲಿ ಭಾಗವಹಿಸುವಾಗ ಸಲ್ಲಿಸತಕ್ಕದ್ದು.

೪೯) ಟೆಂಡರ್ ಅರ್ಜಿಯ ಪ್ರತಿ ಮತ್ತು ಅಗತ್ಯ ದಾಖಲಾತಿ ಹಾಗೂ (RTGS/NEFT) ವಿವರಗಳೊಂದಿಗೆ ದಿನಾಂಕ: ೧೨-೦೪-೨೦೨೨ ರ ಬೆಳಗ್ಗೆ ೧೧:೦೦ ಗಂಟೆಯೊಳಗೆ ಕಚೇರಿ ವೇಳೆಯಲ್ಲಿ ಸಂಚಾರ ಶಾಖೆಯ ವಿಷಯ ನಿರ್ವಾಹಕರಿಗೆ ಸಲ್ಲಿಸತಕ್ಕದ್ದು, ತಡವಾಗಿ ಬಂದವರ ಮನವಿಯನ್ನು ಪರಿಣಿಸಲಾಗುವುದಿಲ್ಲಾ.

೫೦) ವಿಭಾಗೀಯ ಕಛೇರಿ / ಸಂಬಂಧಪಟ್ಟ ಘಟಕದ ಅಕೌಂಟ ಸಂಖ್ಯೆ / ಐ.ಎಫ್.ಸಿ. ಕೋಡನ್ನು ಒದಗಿಸಲಾಗುವುದು. ಪರವಾನಿದಾರರು ಆರ್.ಟಿ.ಜಿ.ಎಸ್. / ಎನ್.ಇ.ಎಫ್.ಟಿ. ಮೂಲಕ ಪಾವತಿ ಮಾಡುವಾಗ ಜಾಹೀರಾತು ಪ್ರದರ್ಶನ ಮಾಡುವ ಪ್ಯಾಕೇಜ್‌ನ ವಿವರ, ಪರವಾನಿಗೆದಾರರ ಹೆಸರನ್ನು ಕಡ್ಡಾಯವಾಗಿ ನಮೂದಿಸತಕ್ಕದ್ದು.

೫೧) ಬಾಲ ಕಾರ್ಮಿಕರನ್ನು ನಿಯೋಜಿಸಿಕೊಳ್ಳುವುದನ್ನು ನಿಷೇಧಿಸಲಾಗಿದೆ. ಅಲ್ಲದೇ ಜಾಹೀರಾತು ಪ್ಯಾಕೇಜ್‌ಗಳಿಗೆ ನಿಗಧಿಪಡಿಸಿರುವ ಸ್ಥಳಗಳನ್ನು ಯಥಾಸ್ಥಿತಿಯಲ್ಲಿ ನೀಡಲಾಗುವುದು. ಯಾವುದೇ ಮಾರ್ಪಾಡಿಗೆ ಅವಕಾಶವಿರುವುದಿಲ್ಲ.

೫೨) ಕಾಲಕಾಲಕ್ಕೆ ಕೇಂದ್ರ ಸರ್ಕಾರದಿಂದ, ರಾಜ್ಯ ಸರ್ಕಾರದಿಂದ, ಸಂಸ್ಥೆಯಿಂದ ಹಾಗೂ ಸ್ಥಳಿಯ ಪ್ರಾಧಿಕಾರಗಳಿಂದ ಹೊರಡಿಸುವ ಆದೇಶಗಳನ್ನು ಪಾಲಿಸಲು ಪರವಾನಿಗೆದಾರರು ಬದ್ದರಾಗಿರತಕ್ಕದ್ದು.

೫೩) ಜಾಹೀರಾತು ಪ್ಯಾಕೇಜ್‌ಗಳಿಗೆ ಆಯ್ಕೆಯಾಗುವ ಪರವಾನಗಿದಾರರು ಸಂಸ್ಥೆಯೊಂದಿಗೆ ಮಾಡಿಕೊಂಡ ಒಪ್ಪಂದದ ನಂತರ ಪರವಾನಗಿ (Licensor) ಮತ್ತು ಪರವಾನಗಿದಾರ (Licensee) ಮಧ್ಯ ಉಂಟಾಗುವ ವಾಜ್ಯದ ಕುರಿತು ವ್ಯವಸ್ಥಾಪಕ ನಿರ್ದೇಶಕರ ತೀರ್ಮಾನ ಅಂತಿಮವಾಗಿರುತ್ತದೆ.

೫೪) ಪರವಾನಿಗೆದಾರರೊಂದಿಗೆ ಕರಾರು ಒಪ್ಪಂದ ಮಾಡಿಕೊಳ್ಳುವ ಸಮಯದಲ್ಲಿ **Dispute Resolution Clause** ನ್ನು ಅಳವಡಿಸಿಕೊಳ್ಳುವುದು. ಅದರಂತೆ ಪರವಾನಿಗೆದಾರರು ಮತ್ತು ಸಂಸ್ಥೆಯ ಮಧ್ಯ ಯಾವುದೇ ವ್ಯಾಜ್ಯ/ತಕರಾರು ಉಂಟಾದಲ್ಲಿ, ನಿಗಮದ ವ್ಯವಸ್ಥಾಪಕ ನಿರ್ದೇಶಕರು ಮಧ್ಯಸ್ಥಿಕೆಯಾಗಿರುತ್ತಾರೆ. ಸದರಿಯವರ ತೀರ್ಮಾನವೇ ಅಂತಿಮವಾಗಿರುತ್ತದೆ.

೫೫) ಟೆಂಡರನಲ್ಲಿ ಭಾಗವಹಿಸುವ ಅಭ್ಯರ್ಥಿಗಳು ನೇರವಾಗಿ ದಿನಾಂಕ: ೧೨-೦೪-೨೦೨೨ ರಂದು ನಡೆಯುವ ಮ್ಯಾನುವಲ್ ಸಂಧಾನದಲ್ಲಿ ಭಾಗವಹಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ವಿಭಾಗೀಯ ಸಂಚಾರ ಅಧಿಕಾರಿ ರವರ ದೂರವಾಣಿ ಸಂ: ೭೭೬೦೯೯೨೧೫೨ ಗೆ ಅಥವಾ ಸಂಚಾರ ಶಾಖೆ, ವಿಭಾಗೀಯ ಕಚೇರಿ, ಕಕರಸಾ ನಿಗಮ, ಬಳ್ಳಾರಿ ವಿಭಾಗ, ಬಳ್ಳಾರಿ ಇಲ್ಲಿಗೆ ಸಂಪರ್ಕಿಸಬಹುದಾಗಿದೆ.

9.......

ಮ್ಯಾನುವಲ್ ಸಂಧಾನದ ಟೆಂಡರ್‌ಗೆ ಸಂಬಂಧಿಸಿದಂತೆ ಅರ್ಜಿಗಳನ್ನು ಪಡೆಯುವ **ದಿನಾಂಕ: 12-04-2022 ರ 11:00** ಗಂಟೆಯವರೆಗೆ ನಿಗಧಿಪಡಿಸಲಾಗಿದೆ. ಹಾಗೆಯೇ ಅರ್ಜಿಗಳನ್ನು ಸ್ವೀಕರಿಸಿದ ಬಿಡ್‌ದಾರರು ಸಂಧಾನದ ಅರ್ಜಿಗಳನ್ನು **ದಿನಾಂಕ: 12-04-2022 ರ 11:00** ಗಂಟೆಯೊಳಗೆ ಭರ್ತಿ ಮಾಡಿ ಸಲ್ಲಿಸಲು ವಾಣಿಜ್ಯ ವಿಷಯ ನಿರ್ವಾಹಕರು, ಸಂಚಾರ ಶಾಖೆ, ವಿಭಾಗೀಯ ಕಚೇರಿ, ಕಕರಸಾ ನಿಗಮ, ಬಳ್ಳಾರಿ ರವರಿಗೆ ನೀಡುವುದು. ನಿಗಧಿತ ದಿನಾಂಕ/ಸಮಯದ ನಂತರ ಬರುವ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.

**ಮ್ಯಾನುವಲ್ ಸಂಧಾನದ ಟೆಂಡರ್‌ನ್ನು** ದಿನಾಂಕ: 12-04-2022 ರ ಬೆಳಗ್ಗೆ 12:00 ಗಂಟೆಗೆ ನಂತರ ಟೆಂಡರ್ ಕಮಿಟಿ ಸಮಕ್ಷಮದಲ್ಲಿ ನಡೆಸಲಾಗುವುದು. ಸಂಸ್ಥೆಯು ನಿಗಧಿಪಡಿಸಿರುವ ಹೋರ್ಡಿಂಗ್ಸ್ ಜಾಹೀರಾತುಗಳಿಗೆ ಮ್ಯಾನುವಲ್ ಸಂಧಾನದಲ್ಲಿ ಭಾಗವಹಿಸಲು ಇಚ್ಛಿಸಿರುವ ಬೇಡಿಕೆದಾರರು ಸಂಸ್ಥೆಯ ಷರತ್ತು / ನಿಬಂಧನೆಗಳನ್ನು ಹಾಗೂ ಕಾಲ-ಕಾಲಕ್ಕೆ ಹೊರಡಿಸುವ ಸುತ್ತೋಲೆಗಳನ್ನು ಕಡ್ಡಾಯವಾಗಿ ಪಾಲಿಸಬೇಕಿರುತ್ತದೆ.

**ಮ್ಯಾನುವಲ್ ಸಂಧಾನದ ಟೆಂಡರ್‌ಗಳನ್ನು ಸ್ವೀಕರಿಸುವ, ತಿರಸ್ಕರಿಸುವ ಅಥವಾ ಯಾವುದೇ ಮುನ್ಸೂಚನೆ ಇಲ್ಲದೆ ಟೆಂಡರ್‌ಗೆ ಬೇಡಿಕೆದಾರರನ್ನು ಆಯ್ಕೆ ಮಾಡುವ ಅಥವಾ ಮ್ಯಾನುವಲ್ ಸಂಧಾನದ ಟೆಂಡರ್‌ಗಳನ್ನು ಮುಂದೂಡುವ ಅಥವಾ ಮಾರ್ಪಾಟು ಮಾಡುವ/ಪ್ರಕಟಣೆಯನ್ನೇ ರದ್ದು ಪಡಿಸುವ ಅಧಿಕಾರವನ್ನು ಸಂಸ್ಥೆಯು ಕಾಯ್ದಿರಿಸಿಕೊಂಡಿದೆ.**

ಸಹಿ/-
ವಿಭಾಗೀಯ ನಿಯಂತ್ರಣಾಧಿಕಾರಿ,
ಕಕರಸಾ ನಿಗಮ : ಬಳ್ಳಾರಿ ವಿಭಾಗ : ಬಳ್ಳಾರಿ.